


ಪರಮಪೂಜ್ಯ ಚಾರಿತ್ರಚಕ್ರವರ್ತಿ ಆಚಾರ್ಯ ಶ್ರೀ ೧೦೮ ಶಾಂತಿಸಾಗರ ಮುನಿ ಮಹಾರಾಜರು

ಪರಮಪೂಜ್ಯ ಚಾರಿತ್ರಚಕ್ರವರ್ತಿ ಪ್ರಾತಃಸ್ಮರಣೀಯ
ಆಚಾರ್ಯ ಶ್ರೀ 108 ಶಾಂತಿಸಾಗರ ಮಹಾರಾಜರ

## 131ನೇ ಜನ್ಮ ಜಯಂತಿ

| | | |
|---|---|---|
| ದಿವ್ಯಾಯದಾನ | - | ಸಮಾರೋಪ |
| ಪ್ರಾರಂಭ | - | 17-07-2003 |
| ಸಮಾಪ್ತಿ | - | 18-07-2004 |

ಮನೆ ಮನೆಯಲ್ಲಾಗಲಿ ಶಾಂತಿಸಾಗರ
ಪ್ರತಿ ಮನೆಯಲ್ಲಾಗಲಿ ಶಾಂತಿಸಾಗರ
ಅಜ್ಞಾನಿಗೆ ಗುರುವಾಗುವುದರ ಬದಲು
ಜ್ಞಾನಿಯ ಶಿಷ್ಯನಾಗುವುದೇ ಲೇಸು.

ಓಂ ನಮಃ ಸಿದ್ಧೇಭ್ಯಃ

ಬಾಹುಬಲಿ ಬಳಗ ಪ್ರಕಾಶನ

ಪರಮ ಪೂಜ್ಯ ಆಚಾರ್ಯಶ್ರೀ ವಿದ್ಯಾನಂದ ಮುನಿಮಹಾರಾಜರ

# ಪ್ರವಚನ ಪರಿಮಳ

## ಭಾಗ-4

ಭಾವಾನುವಾದಕರು :

ವಿದ್ವಾನ್ ಶ್ರೀ ಬಿ. ಚಂದ್ರಯ್ಯ, ಮೂಡುಬಿದ್ರಿ


ಪ್ರಕಾಶಕರು :

ಯಂ.ಸಿ. ಅನಂತರಾಜಯ್ಯ ಮತ್ತು ಪರಿವಾರ

262/43, ಅಶೋಕಸ್ತಂಭರಸ್ತೆ, ಜಯನಗರ,

ಬೆಂಗಳೂರು - 560 011

**ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ**
**ಪಂಡಿತಾಚಾರ್ಯವರ್ಯ ಸ್ವಾಮೀಜಿ**
ಶ್ರೀ ಜೈನಮಠ, ಮೂಡುಬಿದಿರೆ-574227
ದಕ್ಷಿಣಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ
ಫೋನ್: 08258-60318, 60418



## ಆಶೀರ್ವಚನ

ಓಂ ನಮಃ ಸಿದ್ಧೇಭ್ಯಃ

**ಕೊಲೆಯುಂ ಪುಸಿಯುಂ ಕಳವುಂ**
**ಕುಲಟಾ ಸಂಗಮುಮಧಿಕ ಕಾಂಕ್ಷೆಯುಮೆಂಬೀ**
**ಬಲ ಕರ್ಮ ಹೇತುಗಳನವಿಚಲಮತಿಯಂ**
**ಬಿಸುಟು ನೆಗವಿಲ್ದುದಿದು ತಾ ಧರ್ಮಂ ॥**

ಎಂದು ನೇಮಿನಾಥ ಪುರಾಣದಲ್ಲಿ ಕರ್ಣಾಚಾರ್ಯನು ಮುನಿ ಧರ್ಮವೆಂದರೇನು ? ಅದರ ಲಾಭವೇನು ? ಎಂಬುದನ್ನು ತಿಳಿಸಿಹೇಳಿ, ಕೊಲೆ, ಸುಳ್ಳು, ಕಳವು, ಪರಸ್ತ್ರೀ ಮೋಹ, ಧನಲೋಭ ಇವೆಲ್ಲ ಕರ್ಮಹೇತು ಇವುಗಳನ್ನು ದೃಢವಾದ ಒಳ್ಳೆ ಮನಸ್ಸಿನಿಂದ ಬಿಟ್ಟುಬಿಡುವುದೇ ಧರ್ಮವೆಂದು ಹೇಳಿದ್ದಾರೆ.

ದಯೆ, ಧರ್ಮ, ದಾನ, ಧೈರ್ಯ, ತಪ, ಶೀಲ ವಾಸ್ತವಾಂತಗಳನ್ನು ಗುಣಗಳಿಂದ ಕೂಡಿದ ಪುಣ್ಯಾಸ್ರವದ ಕಥೆ, ಚಿಂತನೆ, ದರ್ಶನಗಳ ವಾಸ್ತವಾಂಶವನ್ನು ತಿಳಿಯಾದ ಅರ್ಥ ನಿರೂಪಣೆಯನ್ನು ಘನತೆ ಗಂಭೀರವಾದ ರಚನೆಗಳಿಂದ ವಿವರಿಸಿ ಉಪದೇಶಿಸುವ ಕ್ರಮ ಸರಿಯಾಗಿರದಿದ್ದರೆ ಲೋಕದ ಜನರನ್ನು ಧರ್ಮಮಾರ್ಗದಲ್ಲಿ ಒಲಿಸಿ, ಸಮ್ಯಕ್ತ್ವಾವಲಂಬಿಗಳನ್ನಾಗಿ ಮಾಡಲು ಸಾಧ್ಯವಿಲ್ಲ. ಮಹಾನ್ ಪುರುಷರ ಮುಖ್ಯ ಕಾರ್ಯವೇ ಜನರನ್ನು ಆತ್ಮ ಕಲ್ಯಾಣದ ಪಥಕ್ಕೆ ಹಚ್ಚಿ ಅವರಿಗೆ ಮೋಕ್ಷದ ಪಥವನ್ನು ತೋರಿಸಿಕೊಡುವುದು ಹಾಗೂ ತಾವು ಕೂಡಾ ತಮ್ಮ ಆತ್ಮ ಕಲ್ಯಾಣದಲ್ಲಿ ನಿರತರಾಗುವುದು, ಪಂಚಮ ಕಾಲದ ಮಹಾನ್ ಸಿದ್ಧಾಂತವೇತ್ತರೂ, ತಪೋನಿರತರೂ, ವಾತ್ಸಲ್ಯ ಮೂರ್ತಿಯೂ

ಗಂಭೀರ ಜಿನವಾಣಿಯ ಹಂಸನಾದದ ಕವಾಟೋದ್ಘಾಟನೆಯನ್ನು ಮಾಡುತ್ತಿರುವ 108 ಆಚಾರ್ಯ ಶ್ರೀ ವಿದ್ಯಾನಂದ ಮುನಿ ಮಹಾರಾಜರು ನಮ್ಮೆಲ್ಲರಿಗೂ ಜಗತ್ತಿನ ತತ್ತ್ವಗಳ ದರ್ಶನದ ಜತೆಗೆ ಜೈನ ಸತ್ಯದರ್ಶನದ ಮಹತ್ವವನ್ನು ಅದರಲ್ಲಿ ಅಡಗಿರುವ ರಹಸ್ಯವನ್ನು ಆತ್ಮತತ್ತ್ವ, ಕರ್ಮ, ಪಂಚಾಣುವ್ರತ, ಸಮಿತಿ, ಸಪ್ತತತ್ತ್ವ ನವಪದಾರ್ಥ, ದ್ವಾದಶಾನು ಪ್ರೇಕ್ಷೆಗಳು, ತ್ರಿಗುಪ್ತಿಗಳು, ಚತುರ್ದಶ ಗುಣಸ್ಥಾನಗಳು, ಅನೇಕಾಂತವಾದ ರತ್ನತ್ರಯ ಮಾನವನ ಭವಬಂಧನಗಳನ್ನು ಹಿಂಸೆ-ಪ್ರಮಾದಗಳನ್ನು ಪ್ರಾಯಶ್ಚಿತ್ತ ಮಂದಕಷಾಯದ ಮೂಲಕ ಕಡಿಮೆಗೊಳಿಸಿ ಪೂರ್ಣ ನಿರ್ಮಲ ಮನಸ್ಸಿನಿಂದ ಮೋಕ್ಷವನ್ನು ಪಡೆಯುವ ವಿಧಾನವನ್ನು ಆಚಾರ್ಯ ವಿಶ್ವಸಂತ ಮಹಾನ್ ವಾಣಿಯಿಂದ ಕೇಳಿಯೇ ತಿಳಿಯಬೇಕು. ಅವರ ಆ ಮಹಾನ್ ವಿಚಾರಧಾರೆಯನ್ನು ಅಕ್ಷರರೂಪದಲ್ಲಿ ಸೆರೆಹಿಡಿಯುವುದು ಭರತೇಶ ದಿಗ್ವಿಜಯವೇ ಸರಿ. ಆ ಕೆಲಸವನ್ನು ನಮ್ಮ ನಿಮ್ಮೆಲ್ಲರ ಹೆಮ್ಮೆಯ ಪತ್ರಿಕೆ ವಿವೇಕಾಭ್ಯುದಯದಲ್ಲಿ ಹಲವು ದಶಕಗಳಿಂದ ಸಂಪಾದಕ ವಿದ್ವಾನ್ ಚಂದ್ರಯ್ಯನವರು ಅರ್ಥಪೂರ್ಣವಾಗಿ ಆಚಾರ್ಯರಿಗೆ ಸ್ವತಃ ತೃಪ್ತಿ ಬರುವಂತೆ ಭಾವಾನುವಾದ ಮಾಡಿದ್ದಾರೆ. ನಮ್ಮ ಶ್ರೀಮಠದ ಅನುಮತಿ ಪಡೆದು ಆಚಾರ್ಯರ ಹಾಗೂ ದಿಗಂಬರ ಜೈನ ಸಮಾಜದ ಸಂತರ ಜಿನ ಚೈತ್ಯಾಲಯ ಶಾಸ್ತ್ರಗಳ ಆಚಾರ-ಭಕ್ತಿ-ಗೌರವಗಳ ಕಳಕಳಿಯನ್ನೆಲ್ಲಾ ಹೊಂದಿದಂತೆ. ಬೆಂಗಳೂರಿನ ಜೈನಧರ್ಮ ಶ್ರದ್ಧಾಳುಗಳಾದ ಶ್ರೀ ಎಂ.ಸಿ. ಅನಂತರಾಜಯ್ಯನವರು ಕನ್ನಡ ಅವತರಣಿಕೆಯ 4ನೇ ಭಾಗವನ್ನು ಪ್ರಕಾಶಪಡಿಸಿ ಕನ್ನಡ ಭಾಷಿಗರ ಮಹಾನ್ ಬೇಡಿಕೆಯೊಂದನ್ನು ಪೂರ್ತಿಗೊಳಿಸಿದ್ದಾರೆ. ಇದೊಂದು ಅಪೂರ್ವ ಕೃತಿ. ಶ್ರಾವಕರು ನಿತ್ಯ ಸ್ವಾಧ್ಯಾಯಕ್ಕಾಗಿ ಉಪಯೋಗಿಸಿಕೊಳ್ಳಬೇಕಾದ ಜ್ಞಾನ ದೀಪ. 20ನೇ ಶತಮಾನದ ಪ್ರಥಮ ಆಚಾರ್ಯ ಶಾಂತಿಸಾಗರ ಮಹಾರಾಜರ ಸಂಯಮ ವರ್ಷವನ್ನು 108 ಸಿದ್ಧಾಂತ ಚಕ್ರವರ್ತಿ ಆಚಾರ್ಯ ವಿದ್ಯಾನಂದರ ಮಹಾನ್ ಪ್ರೇರಣೆಯಂತೆ ದೇಶಾದ್ಯಂತ ಅಭೂತ ಪೂರ್ವವಾಗಿ ಆಚರಿಸುವ ಪುಣ್ಯಸಂದರ್ಭದಲ್ಲಿ ದೆಹಲಿಯಲ್ಲಿ ಆಚಾರ್ಯರ ಜನ್ಮ ಜಯಂತಿಯಂದೇ ಈ ಗ್ರಂಥ ಬಿಡುಗಡೆಗೊಳ್ಳುತ್ತಿರುವುದು ನಮ್ಮೆಲ್ಲರ ಭಾಗ್ಯವೇ ಸರಿ. ಗ್ರಂಥವು ತಪ್ಪಿಲ್ಲದೆ ಸುಂದರ ಪುಟಗಳೊಂದಿಗೆ ಪ್ರಕಟಣೆಗೊಳ್ಳಲಿ ಎಂದು ಹಾರೈಸುತ್ತೇವೆ. ಸರ್ವರೂ ರತ್ನತ್ರಯ ಧರ್ಮದ ಆರಾಧಕರಾಗಿರಿ, ಪ್ರಭಾವವಂತರಾಗಿರಿ, ಸುಖ ಶಾಂತಿ ಸಮೃದ್ಧಿಯನ್ನು ಪಡೆಯಿರಿ.

ಇತೀ ಭದ್ರಂ ಭೂಯಾತ್ ವರ್ಧತಾಂ ಜಿನಶಾಸನಂ

**ಪ॥ಪೂ॥ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಗಳು**




**ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ**

ಶ್ರೀ ಜೈನಮಠ, ಮೂಡುಬಿದಿರೆ-574227
ದಕ್ಷಿಣಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ
ಫೋನ್: 08258-60318, 60418


## ಆಶೀರ್ವಚನ

ಓಂ ನಮಃ ಸಿದ್ಧೇಭ್ಯಃ

**ಕೊಲೆಯುಂ ಪುಸಿಯುಂ ಕಳವುಂ**
**ಕುಲಟಾ ಸಂಗಮುಮಧಿಕ ಕಾಂಕ್ಷೆಯುಮೆಂಬೀ**
**ಬಲ ಕರ್ಮ ಹೇತುಗಳನವಿಚಲಮತಿಯಿಂ**
**ಬಿಸುಟು ನೆಗವಿಲ್ದಿದು ತಾ ಧರ್ಮಂ ॥**

ಎಂದು ನೇಮಿನಾಥ ಪುರಾಣದಲ್ಲಿ ಕರ್ಣಚಾರ್ಯನು ಮುನಿ ಧರ್ಮವೆಂದರೇನು ? ಅದರ ಲಾಭವೇನು ? ಎಂಬುದನ್ನು ತಿಳಿಸಿಹೇಳಿ; ಕೊಲೆ, ಸುಳ್ಳು, ಕಳವು, ಪರಸ್ತ್ರೀ ಮೋಹ, ಧನಲೋಭ ಇವೆಲ್ಲ ಕರ್ಮಹೇತು ಇವುಗಳನ್ನು ದೃಢವಾದ ಒಳ್ಳೆ ಮನಸ್ಸಿನಿಂದ ಬಿಟ್ಟುಬಿಡುವುದೇ ಧರ್ಮವೆಂದು ಹೇಳಿದ್ದಾರೆ.

ದಯೆ, ಧರ್ಮ, ದಾನ, ಧೈರ್ಯ, ತಪ, ಶೀಲ ವಾಸ್ತವಾಂಶಗಳನ್ನು ಗುಣಗಳಿಂದ ಕೂಡಿದ ಪುಣ್ಯಾಸ್ರವದ ಕಥೆ, ಚಿಂತನೆ, ದರ್ಶನಗಳ ವಾಸ್ತವಾಂಶವನ್ನು ತಿಳಿಯಾದ ಅರ್ಥ ನಿರೂಪಣೆಯನ್ನು ಘನತೆ ಗಂಭೀರವಾದ ರಚನೆಗಳಿಂದ ವಿವರಿಸಿ ಉಪದೇಶಿಸುವ ಕ್ರಮ ಸರಿಯಾಗಿರದಿದ್ದರೆ ಲೋಕದ ಜನರನ್ನು ಧರ್ಮಮಾರ್ಗದಲ್ಲಿ ಒಲಿಸಿ, ಸಮ್ಯಕ್ತ್ವಾವಲಂಬಿಗಳನ್ನಾಗಿ ಮಾಡಲು ಸಾಧ್ಯವಿಲ್ಲ, ಮಹಾನ್ ಪುರುಷರ ಮುಖ್ಯ ಕಾರ್ಯವೇ ಜನರನ್ನು ಆತ್ಮ ಕಲ್ಯಾಣದ ಪಥಕ್ಕೆ ಹಚ್ಚಿ ಅವರಿಗೆ ಮೋಕ್ಷದ ಪಥವನ್ನು ತೋರಿಸಿಕೊಡುವುದು ಹಾಗೂ ತಾವು ಕೂಡಾ ತಮ್ಮ ಆತ್ಮ ಕಲ್ಯಾಣದಲ್ಲಿ ನಿರತರಾಗುವುದು, ಪಂಚಮ ಕಾಲದ ಮಹಾನ್ ಸಿದ್ಧಾಂತವೇತ್ತರೂ, ತಪೋನಿರತರೂ, ವಾತ್ಸಲ್ಯ ಮೂರ್ತಿಯೂ ಗಂಭೀರ ಜಿನವಾಣಿಯ ಹಂಸನಾದದ ಕವಾಟೋದ್ಘಾಟನೆಯನ್ನು ಮಾಡುತ್ತಿರುವ 108 ಆಚಾರ್ಯ ಶ್ರೀ ವಿದ್ಯಾನಂದ ಮುನಿ ಮಹಾರಾಜರು ನಮ್ಮೆಲ್ಲರಿಗೂ ಜಗತ್ತಿನ ತತ್ತ್ವಗಳ ದರ್ಶನದ ಜತೆಗೆ ಜೈನ ಸತ್ಯದರ್ಶನದ ಮಹತ್ವವನ್ನು ಅದರಲ್ಲಿ ಅಡಗಿರುವ ರಹಸ್ಯವನ್ನು

ಆತ್ಮತತ್ತ್ವ, ಕರ್ಮ, ಪಂಚಾಣುವ್ರತ, ಸಮಿತಿ, ಸಪ್ತತತ್ತ್ವ ನವಪದಾರ್ಥ, ದ್ವಾದಶಾನುಪ್ರೇಕ್ಷೆಗಳು, ತ್ರಿಗುಪ್ತಿಗಳು, ಚತುರ್ದಶ ಗುಣಸ್ಥಾನಗಳು, ಅನೇಕಾಂತವಾದ ರತ್ನತ್ರಯ ಮಾನವನ ಭವಬಂಧನಗಳನ್ನು ಹಿಂಸೆ-ಪ್ರಮಾದಗಳನ್ನು ಪ್ರಾಯಶ್ಚಿತ್ತ ಮಂದಕಷಾಯದ ಮೂಲಕ ಕಡಿಮೆಗೊಳಿಸಿ ಪೂರ್ಣ ನಿರ್ಮಲ ಮನಸ್ಸಿನಿಂದ ಮೋಕ್ಷವನ್ನು ಪಡೆಯುವ ವಿಧಾನವನ್ನು ಆಚಾರ್ಯ ವಿಶ್ವಸಂತ ಮಹಾನ್ ವಾಣಿಯಿಂದ ಕೇಳಿಯೇ ತಿಳಿಯಬೇಕು. ಅವರ ಆ ಮಹಾನ್ ವಿಚಾರಧಾರೆಯನ್ನು ಅಕ್ಷರರೂಪದಲ್ಲಿ ಸೆರೆಹಿಡಿಯುವುದು ಭರತೇಶ ದಿಗ್ವಿಜಯವೇ ಸರಿ. ಆ ಕೆಲಸವನ್ನು ನಮ್ಮ ನಿಮ್ಮೆಲ್ಲರ ಹೆಮ್ಮೆಯ ಪತ್ರಿಕೆ ವಿವೇಕಾಭ್ಯುದಯದಲ್ಲಿ ಹಲವು ದಶಕಗಳಿಂದ ಸಂಪಾದಕ ವಿದ್ವಾನ್ ಚಂದ್ರಯ್ಯನವರು ಅರ್ಥಪೂರ್ಣವಾಗಿ ಆಚಾರ್ಯರಿಗೆ ಸ್ವತಃ ತೃಪ್ತಿ ಬರುವಂತೆ ಭಾವಾನುವಾದ ಮಾಡಿದ್ದಾರೆ. ನಮ್ಮ ಶ್ರೀಮಠದ ಅನುಮತಿ ಪಡೆದು ಆಚಾರ್ಯರ ಹಾಗೂ ದಿಗಂಬರ ಜೈನ ಸಮಾಜದ ಸಂತರ ಜಿನ ಚೈತ್ಯಾಲಯ ಶಾಸ್ತ್ರಗಳ ಆಚಾರ-ಭಕ್ತಿ-ಗೌರವಗಳ ಕಳಕಳಿಯನ್ನೆಲ್ಲಾ ಹೊಂದಿದಂತೆ. ಬೆಂಗಳೂರಿನ ಜೈನಧರ್ಮ ಶ್ರದ್ಧಾಳುಗಳಾದ ಶ್ರೀ ಎಂ.ಸಿ. ಅನಂತರಾಜಯ್ಯನವರು ಕನ್ನಡ ಅವತರಣಿಕೆಯ 4ನೇ ಭಾಗವನ್ನು ಪ್ರಕಾಶಪಡಿಸಿ ಕನ್ನಡ ಭಾಷಿಗರ ಮಹಾನ್ ಬೇಡಿಕೆಯೊಂದನ್ನು ಪೂರ್ತಿಗೊಳಿಸಿದ್ದಾರೆ. ಇದೊಂದು ಅಪೂರ್ವ ಕೃತಿ. ಶ್ರಾವಕರು ನಿತ್ಯ ಸ್ವಾಧ್ಯಾಯಕ್ಕಾಗಿ ಉಪಯೋಗಿಸಿಕೊಳ್ಳಬೇಕಾದ ಜ್ಞಾನ ದೀಪ. 20ನೇ ಶತಮಾನದ ಪ್ರಥಮ ಆಚಾರ್ಯ ಶಾಂತಿಸಾಗರ ಮಹಾರಾಜರ ಸಂಯಮ ವರ್ಷವನ್ನು 108 ಸಿದ್ಧಾಂತ ಚಕ್ರವರ್ತಿ ಆಚಾರ್ಯ ವಿದ್ಯಾನಂದರ ಮಹಾನ್ ಪ್ರೇರಣೆಯಂತೆ ದೇಶಾದ್ಯಂತ ಅಭೂತ ಪೂರ್ವವಾಗಿ ಆಚರಿಸುವ ಪುಣ್ಯಸಂದರ್ಭದಲ್ಲಿ ದೆಹಲಿಯಲ್ಲಿ ಆಚಾರ್ಯರ ಜನ್ಮ ಜಯಂತಿಯಂದೇ ಈ ಗ್ರಂಥ ಬಿಡುಗಡೆಗೊಳ್ಳುತ್ತಿರುವುದು ನಮ್ಮೆಲ್ಲರ ಭಾಗ್ಯವೇ ಸರಿ. ಗ್ರಂಥವು ತಪ್ಪಿಲ್ಲದೆ ಸುಂದರ ಪುಟಗಳೊಂದಿಗೆ ಪ್ರಕಟಣೆಗೊಳ್ಳಲಿ ಎಂದು ಹಾರೈಸುತ್ತೇವೆ. ಸರ್ವರೂ ರತ್ನತ್ರಯ ಧರ್ಮದ ಆರಾಧಕರಾಗಿರಿ, ಪ್ರಭಾವವಂತರಾಗಿರಿ, ಸುಖ ಶಾಂತಿ ಸಮೃದ್ಧಿಯನ್ನು ಪಡೆಯಿರಿ.

ಇತೀ ಭದ್ರಂ ಭೂಯಾತ್ ವರ್ಧತಾಂ ಜಿನಶಾಸನಂ

**ಪ॥ಪೂ॥ ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಗಳು**



# ಪ್ರಕಾಶಕರ ನುಡಿ

19ನೇ ಜುಲೈ 2003 ರಿಂದ 18ನೇ ಜುಲೈ 2004ರ ವರೆಗೆ ಪರಮಪೂಜ್ಯ ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರ ಮುನಿ ಮಹಾರಾಜರ ಹೆಸರಿನಲ್ಲಿ ದೇಶಾದ್ಯಂತ **''ಸಂಯಮ ವರ್ಷ''**ವನ್ನಾಗಿ ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮದ ರೂವಾರಿಗಳು ಪರಮಪೂಜ್ಯ ಆಚಾರ್ಯ ಶ್ರೀ ವಿದ್ಯಾನಂದ ಮುನಿಮಹಾರಾಜರು. ಈ ಸಂಯಮ ವರ್ಷದಲ್ಲಿ 22-04-2004ರಂದು ತಮ್ಮ 79 ವರ್ಷಗಳನ್ನು ಪೂರೈಸಿ 80ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಪಾವನ ಸಂದರ್ಭದಲ್ಲಿ ಅವರಿಗೆ ನಾನು ಹಾಗೂ ನನ್ನ ಪರಿವಾರದವರು ವಿನಯಾಂಜಲಿಯ ರೂಪದಲ್ಲಿ ಈ ಕೃತಿಯನ್ನು ಪ.ಪೂ. ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳು, ಶ್ರೀ ಜೈನಮಠ ಮೂಡುಬಿದ್ರಿ ಇವರ ಮೂಲಕ ಅನಂತ ನಮೋಸ್ತುಗಳೊಂದಿಗೆ ಭಕ್ತಿಪೂರ್ವಕ ಸಮರ್ಪಿಸುತ್ತಿದ್ದೇನೆ.

**'ಪ್ರವಚನ ಪರಿಮಳ-ಭಾಗ 4'** ಎನ್ನುವ ಈ ಕೃತಿಯಲ್ಲಿ ಪರಮ ಪೂಜ್ಯ ವಿದ್ಯಾನಂದ ಮುನಿ ಮಹಾರಾಜರ 'ವಚನಾಮೃತ'ವನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಶ್ರೀಕ್ಷೇತ್ರ ಮೂಡುಬಿದ್ರಿಯಿಂದ ಹೊರಡುವ 'ವಿವೇಕಾಭ್ಯುದಯ' ಮಾಸ ಪತ್ರಿಕೆಯಲ್ಲಿ ನಾಡಿನ ಶ್ರೇಷ್ಠ ವಿದ್ವಾಂಸರಾದ ಶ್ರೀ ಬಿ. ಚಂದ್ರಯ್ಯನವರು ಪ್ರಕಟಿಸಿದ್ದ ಲೇಖನಗಳನ್ನು ಸಂಗ್ರಹಿಸಲಾಗಿದೆ. ಈ ಲೇಖನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಅನುಮತಿ ನೀಡಿ ಆಶೀರ್ವಾದ ಮಾಡಿರುವ ಶ್ರೀಕ್ಷೇತ್ರ ಮೂಡುಬಿದ್ರಿಯ ಪೂಜ್ಯ ಶ್ರೀಗಳವರಿಗೆ ಅನಂತ ನಮನಗಳು. ಹಾಗೂ ಈ ಕೃತಿಯ ಪ್ರಕಟನಾಕಾರ್ಯದಲ್ಲಿ ನೆರವು ನೀಡಿದ ಭದ್ರಾವತಿಯ ಸರ್.ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ. ಜೀವಂಧರಕುಮಾರ್ ಹೋತಪೇಟಿ ಇವರಿಗೂ, ಶ್ರೀಮತಿ ಪದ್ಮಬ್ರಹ್ಮಪ್ಪ ಜೆ.ಪಿ.ನಗರ ಮತ್ತು ಶ್ರೀಮತಿ ಪ್ರೇಮ ತಿಮ್ಮಪ್ಪ ಜಯನಗರ ಇವರುಗಳಿಗೂ ಹಾಗೂ ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಕೀರ್ತಿ ಪ್ರಿಂಟರ್ಸ್‌ನವರಿಗೂ ನಮ್ಮ ನೆನಕೆಗಳು, ಮುನಿಶ್ರೀಗಳ ವಚನಾಮೃತವನ್ನು ಎಲ್ಲ ಭವ್ಯ ಜೀವಿಗಳು ಆಸ್ವಾದಿಸಬೇಕೆನ್ನುವುದೇ ನಮ್ಮ ಆಶಯ.

23-04-2004
ಬೆಂಗಳೂರು

**ಯಂ.ಸಿ. ಅನಂತರಾಜಯ್ಯ**
ಹಾಗೂ ಪರಿವಾರದವರು

# ಪರಿವಿಡಿ


| ಕ್ರಮಸಂಖ್ಯೆ ವಿವರ | | ಪುಟ |
|---|---|---|
| 1. ಪ.ಪೂ. ಆಚಾರ್ಯಶ್ರೀ ವಿದ್ಯಾನಂದ ಮುನಿಮಹಾರಾಜರ ಗೃಹತ್ಯಾಗ- | | ೭ |
| 2. ಪ.ಪೂ. ಆಚಾರ್ಯಶ್ರೀ ಶಾಂತಿಸಾಗರರ 131ನೇ ಜನ್ಮ ಜಯಂತಿ | - | ೮ |
| 3. ಪ್ರಾತಃಸ್ಮರಣೀಯ ಚಾರಿತ್ರ ಚಕ್ರವರ್ತಿ ಆಚಾರ್ಯಶ್ರೀ ಶಾಂತಿಸಾಗರರ ಅಂತಿಮ ಆದೇಶ ಮತ್ತು ಉಪದೇಶ | - | ೧೦ |
| 4. ಎಲ್ಲಿ ವೈರಾಗಿಗಳು ವಾಸಿಸುತ್ತಾರೋ ಅದೇ ತಪೋವನ | - | 01 |
| 5. ಜೈನ ಧರ್ಮವು ಜಗತ್ತಿನ ಬಂಧು | - | 13 |
| 6. ಭಜಭಗವಂತಮ್ | - | 18 |
| 7. ಮರಣವೂ ಉಪಕಾರಿಯಾದುದು | - | 26 |
| 8. ಧರ್ಮವರ್ಧನೆಯೇ ಪುರುಷಾರ್ಥ-ಮೋಕ್ಷಲಭ್ಯ | - | 36 |
| 9. ಆತ್ಮೇವ ಗುರುಃ ಆತ್ಮನಃ | - | 47 |
| 10. ನವಕಾರ ಜಪಿಸುತ್ತಾ ನನ್ನ ಪ್ರಾಣವು ಶರೀರದಿಂದ ಹೊರಟು ಹೋಗಲಿ | | 58 |
| 11. ಜಗತ್ತಿನ ಧರ್ಮವೇ ಶಾಶ್ವತ | - | 71 |
| 12. ಶ್ರದ್ಧೆ ದೃಢವಾಗಿರಲಿ | - | 77 |
| 13. ದರ್ಪಣವು ಭೇದಜ್ಞಾನ ಮಾಡಿಸುತ್ತದೆ | - | 91 |
| 14. ಸೋಹಂ ಚಿಂತೆಯೇ ಜ್ಞಾನೀ | - | 103 |
| 15. ಪ್ರಾಚೀನ ಕರ್ಮ ಬಲವಂತವಾದುದು | - | 114 |
| 16. ತನು ಜಿನಮಂದಿರ | - | 128 |
| 17. ಮೂಲ ಮಹಾಮಂತ್ರ | - | 142 |
| 18. ಭಾವತುಂಬಿ ಪೂಜೆ ಮಾಡು | - | 146 |
| 19. ಪೂಜೆಯಲ್ಲಿ ಭಕ್ತಿಯೇ ಮುಖ್ಯ | - | 157 |
| 20. ಹಂಸ-ದೀಪ | - | 161 |




## ಪರಮ ಪೂಜ್ಯ ಆಚಾರ್ಯಶ್ರೀ ವಿದ್ಯಾನಂದ ಮುನಿ ಮಹಾರಾಜರ ಗೃಹತ್ಯಾಗದ ನಂತರ

ಅವರ

## ದೀಕ್ಷಾ ವಿವರಗಳು

| | | | |
|---|---|---|---|
| 1 ಬ್ರಹ್ಮಚರ್ಯ ದೀಕ್ಷಾ | : | 1945 | - ಶೇಡಬಾಳ |
| 2 ಕ್ಷುಲ್ಲಕ ದೀಕ್ಷಾ | : | 1946 | - ಕೊಣ್ಣೂರು, ಕರ್ನಾಟಕ |
| 3 ಮುನಿ ದೀಕ್ಷಾ | : | 1963 | - ದೆಹಲಿ |
| 4 ಉಪಾಧ್ಯಾಯ ದೀಕ್ಷಾ | : | 1974 | - ದೆಹಲಿ |
| 5 ಏಲಾಚಾರ್ಯ ದೀಕ್ಷಾ | : | 1978 | - ದೆಹಲಿ |
| 6 ಆಚಾರ್ಯ ದೀಕ್ಷಾ | : | 1987 | - ದೆಹಲಿ |

## ಪೂಜ್ಯ ಆಚಾರ್ಯಶ್ರೀ ಶಾಂತಿಸಾಗರರ - 131ನೇ ಜನ್ಮ ಜಯಂತಿ

ಚಾರಿತ್ರಚಕ್ರವರ್ತಿ ಪ್ರಾತಃಸ್ಮರಣೀಯ ಆಚಾರ್ಯ ಶಾಂತಿಸಾಗರ ಮಹಾರಾಜರ
131ನೇ ಜನ್ಮ ಜಯಂತಿ

| | | |
|---|---|---|
| ದಿವ್ಯಾಯದಾನ | - | ಸಮಾರೋಪ |
| ಪ್ರಾರಂಭ | - | 17-07-2003 |
| ಸಮಾಪ್ತಿ | - | 18-07-2004 |

**ಮನೆ ಮನೆಯಲ್ಲಾಗಲಿ ಶಾಂತಿಸಾಗರ**
**ಪ್ರತಿ ಮನೆಯಲ್ಲಾಗಲಿ ಶಾಂತಿಸಾಗರ**
**ಅಜ್ಞಾನಿಗೆ ಗುರುವಾಗುವುದರ ಬದಲು**
**ಜ್ಞಾನಿಯ ಶಿಷ್ಯನಾಗುವುದೇ ಲೇಸು.**

---

## ಪ್ರಾತಃಸ್ಮರಣೀಯ ಚಾರಿತ್ರಚಕ್ರವರ್ತಿ ಆಚಾರ್ಯ ಶ್ರೀ 108 ಶಾಂತಿಸಾಗರ ಮಹಾರಾಜರ ಜೀವನದ ಯಶೋಗಾಥೆ

1. ಜನನ : 1872 ಆಷಾಢ ಮಾಸ, ಕೃಷ್ಣಪಕ್ಷ, ಷಷ್ಠಿ ಬುಧವಾರ
2. ಜನ್ಮಭೂಮಿ : ಯಳಗೋಡ
3. ಕರ್ಮಭೂಮಿ : ಭೋಜ, ಬೆಳಗಾವಿ ಜಿಲ್ಲೆ, ಕರ್ನಾಟಕ
4. ಜನ್ಮ ನಾಮ : ಸಾತಗೌಡ ಪಾಟೀಲ
5. ಅ) ತಂದೆ : ಭೀಮಗೌಡ ಪಾಟೀಲ
   ಆ) ತಾಯಿ : ಸತ್ಯವತಿ
   ಇ) ಸಹೋದರರು: (ಕ) ಆದಿಗೌಡ (ಕಾ) ದೇವಗೌಡ (ಕಿ) ತುಮಗೌಡ
   ಈ) ಸಹೋದರಿ : ಕೃಷ್ಣಾಬಾಯಿ



6. **ವೃತ್ತಿ :** ವ್ಯವಸಾಯ, ಬಟ್ಟೆ ಅಂಗಡಿ.
7. **ಸಮಕಾಲೀನ ಮುನಿಗಳ ಪ್ರಭಾವ :** ಬೋರಗಾಂವದ ಆದಿಸಾಗರರು, ದೇವಪ್ಪ ಸ್ವಾಮಿಗಳು
8. **ಕ್ಷುಲ್ಲಕ ದೀಕ್ಷಾ ಗ್ರಹಣ :** ದೇವಪ್ಪ ಸ್ವಾಮಿಗಳಿಂದ, ಉತ್ತೂರು ಗ್ರಾಮದಲ್ಲಿ 1915 ಜ್ಯೇಷ್ಠ ಶುಕ್ಲ ತ್ರಯೋದಶಿಯಂದು ಕ್ಷುಲ್ಲಕ 'ಶಾಂತಿಸಾಗರ' ಎಂಬ ನಾಮಾಂಕಿತ.
9. **ಐಲಕ ದೀಕ್ಷಾ ಗ್ರಹಣ :** ಗಿರಿನಾರ ಪರ್ವತದಲ್ಲಿ ಸಮಡೋಲಿ ಶ್ರಾವಕರ ಸಮ್ಮುಖದಲ್ಲಿ
10. **ದಿಗಂಬರ ದೀಕ್ಷಾ ಗ್ರಹಣ :** ದೇವಪ್ಪ ಸ್ವಾಮಿಗಳಿಂದ, 1920 ಫಾಲ್ಗುಣ ಶುದ್ಧ ಚತುರ್ದಶಿಯಂದು.
11. **ಆಚಾರ್ಯ ಪದವಿ :** 1924ಅಶ್ವಿಜ ಶುಕ್ಲ ಏಕಾದಶಿ, ಬುಧವಾರ ಸಮಡೋಲಿಯಲ್ಲಿ
12. **"ಚಾರಿತ್ರ ಚಕ್ರವರ್ತಿ"ಪದವಿ :** 19-3-1976 ಗಜಪಂಥ ಪಂಚಕಲ್ಯಾಣದಲ್ಲಿ
13. **ಮಾಡಿದ ಒಟ್ಟು ಉಪವಾಸಗಳು :** 9938, (1920 ರಿಂದ 1955ರ ನಡುವೆ)
14. **ಸಮಕಾಲೀನ ಶಿಷ್ಯರು :** ಶ್ರೀ ವೀರಸಾಗರರು, ಶ್ರೀ ನೇಮಿಸಾಗರರು, ಶ್ರೀ ಪಾಯಸಾಗರರು, ಶ್ರೀ ಜ್ಞಾನಸಾಗರರು, ಶ್ರೀ ದೇಶಭೂಷಣರು, ಶ್ರೀ ವರ್ಧಮಾನಸಾಗರರು.
15. **ನಿಯಮ ಸಲ್ಲೇಖನ ಸ್ವೀಕಾರ :** 1955 ಆಗಸ್ 14 ರಂದು
16. **ಯಮ ಸಲ್ಲೇಖನ ಸ್ವೀಕಾರ :** 1955 ಆಗಸ್ಟ್ 17 ರಂದು
17. **ಸಮಾಧಿ :** 18 ಸೆಪ್ಟೆಂಬರ್ 1955 ಬೆಳಿಗ್ಗೆ 7.50ಕ್ಕೆ

卐 卐 卐

## ಪ್ರಾತಃಸ್ಮರಣೀಯ ಚಾರಿತ್ರಚಕ್ರವರ್ತಿ ಆಚಾರ್ಯ ಶ್ರೀ 108 ಶಾಂತಿಸಾಗರ ಮಹಾರಾಜರ

# ಅಂತಿಮ ಆದೇಶ ಮತ್ತು ಉಪದೇಶ

(ದಿನಾಂಕ ೮-೯-೧೯೫೫ರ ಗುರುವಾರ ಸಂಜೆ ೫.೧೦ ರಿಂದ ೫.೩೨ರ ವರೆಗೆ ೨೨ ನಿಮಿಷಗಳ ಮರಾಠಿ ಭಾಷೆಯಲ್ಲಿ ಕೊಟ್ಟ ಅಂತಿಮ ಆದೇಶ ಮತ್ತು ಉಪದೇಶದ ಕನ್ನಡಾನುವಾದ)

ಓಂ ಜಿನಾಯ ನಮಃ, ಓಂ ಜಿನಾಯ ನಮಃ, ಓಂ ಸಿದ್ಧಾಯ ನಮಃ, ಭರತ ಐರಾವತ ಕ್ಷೇತ್ರಸ್ಥ ಭೂತ, ಭವಿಷ್ಯತ್ ವರ್ತಮಾನ ತೀಸ ಚೋವೀಸ, ಭಗವಾನ್ ನಮೋ ನಮಃ. ಶ್ರೀಮಂದರಾದಿ ಇಪ್ಪತ್ತು ವಿರಹಮಾನ ತೀರ್ಥಂಕರ ಭಗವಾನ ನಮೋ ನಮಃ.

ವೃಷಭಾದಿ ಮಹಾವೀರರ ವರೆಗೆ ೧೪೫೨ ಗಣಧರ ದೇವಾಯ ನಮೋ ನಮಃ, ಚಾರಣ ಋದ್ಧಿಧಾರಿ ಮುನೀಶ್ವರಾಯ ನಮೋ ನಮಃ, ಅರವತ್ತು ನಾಲ್ಕು ಋದ್ಧಿಧಾರಿ ಮುನೀಶ್ವರಾಯ ನಮೋ ನಮಃ, ಅಂತಕೃತ ಕೇವಲಿ ಮುನೀಶ್ವರಾಯ ನಮೋ ನಮಃ, ಪ್ರತಿಯೊಬ್ಬ ತೀರ್ಥಂಕರರ ಸಮಯದಲ್ಲಿ ದಶ ದಶ ಘೋರೋಪಸರ್ಗ ವಿಜಯೀ ಮುನೀಶ್ವರಾಯ ನಮೋ ನಮಃ.

ಹನ್ನೊಂದು ಅಂಗ, ಹದಿನಾಲ್ಕು ಪೂರ್ವ ಶಾಸ್ತ್ರವು, ಮಹಾ ಸಮುದ್ರವಾಗಿದೆ. ಅದನ್ನು ವರ್ಣನೆ ಮಾಡುವಂಥ ಶ್ರುತಕೇವಲಿ ಇಂದು ಯಾರೂ ಇಲ್ಲ, ಶ್ರುತಕೇವಲಿಯು ಅದರ ವರ್ಣನೆಯನ್ನು ಮಾಡಬಹುದು, ಕೇವಲಿಯು ಅದರ ವರ್ಣನೆಯನ್ನು ಮಾಡಬಹುದು. ನನ್ನಂತಹ ಕ್ಷುದ್ರ ಮನುಷ್ಯ ಅದರ ವರ್ಣನೆಯನ್ನು ಹೇಗೆ ತಾನೆ ಮಾಡಲು ಸಾಧ್ಯ ? ಆ ಶಾಸ್ತ್ರವು ಸರ್ವಜೀವಗಳ ಕಲ್ಯಾಣವನ್ನು ಮಾಡುತ್ತದೆ, ಜಿನವಾಣಿ ಅಥವಾ ಶ್ರುತದೇವಿಯು ಅನಂತ ಸಮುದ್ರದಂತೆ ಇದ್ದಾಳೆ. ಆದುದರಿಂದ ಅದರಲ್ಲಿ ಜಿನಧರ್ಮವನ್ನು ಯಾವ ಜೀವನು ಧಾರಣೆ ಮಾಡುತ್ತಾನೆಯೋ ಅವನ ಕಲ್ಯಾಣವು ಅವಶ್ಯವಾಗಿ ಆಗುತ್ತದೆ. ಅನಂತ ಸುಖದ ಪ್ರಾಪ್ತಿಯಾಗುವುದಲ್ಲದೆ ಮೋಕ್ಷದ ಪ್ರಾಪ್ತಿಯೂ ಆ ಜೀವನಿಗೆ ಆಗುತ್ತದೆ. ಹೀಗೆ ನಿಯಮವಿದೆ. ಜೀವವು 'ಓಂ' ಎಂಬ ಬೀಜಾಕ್ಷರವನ್ನು ಧಾರಣೆ ಮಾಡಿದರೆ ಆ ಜೀವನ ಕಲ್ಯಾಣವಾಗುವುದು. ಸಮ್ಮೇದ ಶಿಖರದಲ್ಲಿ ಎರಡು ಮಂಗಗಳು ಜಗಳವಾಡುತ್ತಿದ್ದವು. ಅವುಗಳ ಕಿವಿಗೆ ಣಮೋಕಾರ ಮಂತ್ರ ಕೇಳಿದ ಮಾತ್ರದಿಂದ ಅವು ಸ್ವರ್ಗಕ್ಕೆ ಹೋದವು. ಸುದರ್ಶನನೆಂಬ ಶ್ರೇಷ್ಠಿಯು ಅಂತಿಮ ಸ್ಥಿತಿಯಲ್ಲಿದ್ದ ಎತ್ತಿಗೆ ಣಮೋಕಾರ ಮಂತ್ರದ ಉಪದೇಶ ಮಾಡಿದುದರಿಂದ ಅದು ಸ್ವರ್ಗಕ್ಕೆ ಹೋಯಿತು. ಸಪ್ತವ್ಯಸನ



ಧಾರಿಯಾದ ಅಂಜನ ಚೋರನು ಣಮೋಕಾರ ಮಂತ್ರದ ಪ್ರಭಾವದಿಂದ ಸ್ವರ್ಗಕ್ಕೆ ಹೋದನು, ನಂತರ ಮುಕ್ತಿ ಹೊಂದಿದನು. ನೀಚ ಜಾತಿಯ ನಾಯಿಯು ಸಹ ಜೀವಂಧರ ಕುಮಾರನ ಉಪದೇಶದಿಂದ ದೇವ ಗತಿಯನ್ನು ಪಡೆದುಕೊಂಡಿತು. ಇಷ್ಟೊಂದು ಮಹಿಮೆಯಿದೆ ಈ ಜಿನಧರ್ಮದಲ್ಲಿ, ಆದರೆ ಯಾರೂ ಧಾರಣೆ ಮಾಡಲು ಆಸಕ್ತರಿಲ್ಲ, ಜೈನಧರ್ಮೀಯರಾಗಿಯೂ ಜಿನಧರ್ಮದ ಆಚರಣೆಯಲ್ಲಿ ಶ್ರದ್ಧೆಯಿಲ್ಲ, ಅನಂತಕಾಲದಿಂದ ಜೀವ-ಪುದ್ಗಲ ಎರಡೂ ಬೇರೆ ಬೇರೆಯಾಗಿವೆ. ಇದು ಜಗತ್ತಿಗೆಲ್ಲ ಗೊತ್ತಿದೆ, ಆದರೆ ಸರಿಯಾದ ಮಾರ್ಗದರ್ಶನವಿಲ್ಲದೆ ಅದರಲ್ಲಿ ವಿಶ್ವಾಸವಾಗಿಲ್ಲ.

ಪುದ್ಗಲ ಬೇರೆ, ಜೀವ ಬೇರೆ. ಹೀಗೆ ಎರಡೂ ಬೇರೆ ಬೇರೆಯಾಗಿರುವಾಗ ನಾವು ಜೀವವೋ ಪುದ್ಗಲವೋ ಎಂಬ ವಿಷಯವನ್ನು ವಿಚಾರ ಮಾಡಬೇಕಾಗಿದೆ. ನಾವಂತೂ ಚೈತನ್ಯಮಯ ಜೀವವಾಗಿದ್ದೇವೆ, ಪುದ್ಗಲವಲ್ಲ ಅಂದರೆ ಜಡವಸ್ತುವಲ್ಲ, ಪುದ್ಗಲವು ಜೀವನಿಂದ ಬೇರೆಯಾಗಿದೆ. ಅದರಲ್ಲಿ ಜ್ಞಾನವಿಲ್ಲ, ಜ್ಞಾನ, ದರ್ಶನ, ಚೈತನ್ಯ, ಈ ಗುಣಗಳು ಜೀವನಲ್ಲಿವೆ. ಸ್ಪರ್ಶ, ರಸ, ವರ್ಣ, ಗಂಧ ಇವು ಪುದ್ಗಲದಲ್ಲಿವೆ. ಎರಡರ ಗುಣ ಧರ್ಮವು ಭಿನ್ನ ಭಿನ್ನವಾಗಿದೆ. ಆದುದರಿಂದ ಎರಡೂ ಬೇರೆ ಬೇರೆಯಾಗಿವೆ. ನಾವು ಜೀವವೋ ಅಥವಾ ಪುದ್ಗಲವೋ ? ನಾವು ಚೈತನ್ಯಮಯವಾದ ಜೀವವಿದ್ದೇವೆ. ಪುದ್ಗಲದ ಹಿಂದೆ ಬಿದ್ದಿರುವುದರಿಂದ ಈ ಜೀವನಿಗೆ ಮೋಹನೀಯ ಕರ್ಮವು ಆವರಿಸಿದೆ. ಮೋಹನೀಯ ಕರ್ಮವು ಜೀವನ ಘಾತ ಮಾಡುತ್ತದೆ. ಪುದ್ಗಲದ ಪಕ್ಷವನ್ನು ಹಿಡಿದರೆ ಜೀವನ ಘಾತವಾಗುತ್ತದೆ. ನಾವಂತೂ ಜೀವರಿದ್ದೇವೆ. ಆದುದರಿಂದ ಜೀವನ ಕಲ್ಯಾಣ ಮಾಡುವುದು, ಅವನನ್ನು ಅನಂತ ಸುಖದಲ್ಲಿರುವಂತೆ ಮಾಡುವುದು, ಮೋಕ್ಷಕ್ಕೆ ಹೋಗುವುದು ಇದೆಲ್ಲಾ ಈ ಜೀವನಿಗೆ ಆಗುತ್ತದೆ. ಪುದ್ಗಲವು-ಜಡವಸ್ತುವು ಮೋಕ್ಷಕ್ಕೆ ಹೋಗಲಾಗುವುದಿಲ್ಲ, ಇಷ್ಟು ತಿಳಿದೂ ಜಗತ್ತಿನ ಜನರೆಲ್ಲ ಬಾಹ್ಯದಲ್ಲಿ ಎಂದರೆ ಪರವಸ್ತುವಿನ ಮೋಹದಲ್ಲಿ ಮರುಳಾಗಿದ್ದಾರೆ. ಪಂಚಪಾಪಗಳಲ್ಲಿ ಬಿದ್ದಿದ್ದಾರೆ ಮತ್ತು ಇದರಲ್ಲಿ ದರ್ಶನ ಮೋಹನೀಯ ಕರ್ಮದ ಉದಯದಿಂದ ಸಂಯಮದ ಘಾತವಾಗಿದೆ. ಈ ಎರಡೂ ಕರ್ಮಗಳಿಂದ ಜೀವನ ಘಾತವಾಗಿದೆ. ಹಾಗಾದರೆ ನಾವು ಏನು ಮಾಡಬೇಕು ? ಸುಖ ಪ್ರಾಪ್ತಿಯಾಗಬೇಕೆಂದು ಯಾರಿಗೆ ಇಚ್ಛೆ ಇದೆಯೋ ಅಂಥವರಿಗೆ ನಮ್ಮ ಆದೇಶವೇನೆಂದರೆ ಅವರು ದರ್ಶನ ಮೋಹನೀಯ ಕರ್ಮವನ್ನು ನಾಶಮಾಡಿ, ಸಮ್ಯಕ್ತ್ವವನ್ನು ಅರ್ಜಿಸಬೇಕು, ಚಾರಿತ್ರ ಮೋಹನೀಯ ಕರ್ಮವನ್ನು ನಾಶಮಾಡಿ ಸಂಯಮವನ್ನು ಧರಿಸಬೇಕು. ಈ ಎರಡೂ ಮೋಹನೀಯ ಕರ್ಮಗಳ ನಾಶಮಾಡಿ ಆತ್ಮಕಲ್ಯಾಣವನ್ನು ಮಾಡಿಕೊಳ್ಳಬೇಕು. ಇದೇ ನಮ್ಮ ಆದೇಶ. ಇದೇ ನಮ್ಮ ಉಪದೇಶವಾಗಿದೆ. ಅನಂತ ಕಾಲದಿಂದ ಈ ಜೀವನು ಮಿಥ್ಯಾಕರ್ಮದ ಉದಯದಿಂದ ಸಂಸಾರದಲ್ಲಿ ಪರಿಭ್ರಮಣೆ ಮಾಡಿಕೊಂಡು ಬಂದಿದ್ದಾನೆ. ಹೀಗಿರುವಾಗ ಮಿಥ್ಯಾತ್ವ ಕರ್ಮದ ನಾಶದಿಂದಲೇ ನಮ್ಮ ಕಲ್ಯಾಣವಾಗು

ವುದು. ಸಮ್ಯಕ್ತ್ವ ಪ್ರಾಪ್ತಿ ಮಾಡಿಕೊಳ್ಳಬೇಕು. ಸಮ್ಯಕ್ತ್ವ ಅಂದರೇನು ? ಇದನ್ನು ಶ್ರೀ ಕುಂದಕುಂದಾಚಾರ್ಯರು ಸಮಯಸಾರ, ಪ್ರವಚನಸಾರ, ನಿಯಮಸಾರ, ಪಂಚಾಸ್ತಿಕಾಯ, ಅಷ್ಟಪಾಹುಡ ಮತ್ತು ಗೋಮಟಸಾರ ಮೊದಲಾದ ದೊಡ್ಡ ದೊಡ್ಡ ಗ್ರಂಥಗಳಲ್ಲಿ ಹೇಳಿದ್ದಾರೆ. ಆದರೆ ಇದರ ಮೇಲೆ ವಿಶ್ವಾಸ ಮಾಡುವವರಾರು ? ತನ್ನ ಆತ್ಮ ಕಲ್ಯಾಣ ಮಾಡಿಕೊಳ್ಳುವವನು ಮಾತ್ರ ಈರೀತಿ ಮಾಡುವನು. ಹೀಗೆಯೇ ಸಂಸಾರದಲ್ಲಿ ತಿರುಗಾಡುವುದೇ ಇದ್ದರೆ- (ಈ ಆತ್ಮನು ತಿರುಗಾಡುತ್ತಾ ಬಂದಿದ್ದಾನೆ.) ಆದಕ್ಕೆ ಬೇರೆ ಉಪಾಯವಿಲ್ಲ , ಆದರೆ ಹೀಗೆ ಮಾಡಬಾರದು. ಇದೇ ನಮ್ಮ ಆದೇಶವಿದೆ, ಇದೇ ನಮ್ಮ ಉಪದೇಶವಿದೆ. ಓಂ ಸಿದ್ಧಾಯ ನಮಃ.

ನಾವು ಏನು ಮಾಡಬೇಕು ? ದರ್ಶನ ಮೋಹನೀಯ ಕರ್ಮದ ಕ್ಷಯ ಮಾಡಿಕೊಳ್ಳಬೇಕು. ಯಾವುದರಿಂದ ಅದರ ಕ್ಷಯವಾಗುತ್ತದೆ ? ಆತ್ಮ ಚಿಂತನೆಯಿಂದ ಆಗುತ್ತದೆ. ದಾನ, ಪೂಜಾದಿಗಳನ್ನು ಮಾಡಿದರೆ ಪುಣ್ಯಬಂಧವಾಗುತ್ತದೆ. ತೀರ್ಥಯಾತ್ರೆಯನ್ನು ಮಾಡಿದರೆ ಪುಣ್ಯಬಂಧವಾಗುತ್ತದೆ. ಪ್ರತಿಯೊಂದು ಧರ್ಮದ ಕಾರ್ಯದಿಂದ ಪುಣ್ಯಬಂಧವಾಗುತ್ತದೆ. ಕರ್ಮನಿರ್ಜರೆಗೆ ಆತ್ಮ ಚಿಂತನೆಯೇ ಸಾಧನೆಯಾಗಿದೆ. ಕೇವಲಜ್ಞಾನವಾಗಲಿಕ್ಕೆ ಆತ್ಮ ಚಿಂತನೆಯೇ ಸಾಧನವಾಗಿದೆ. ಈ ಅನಂತ ಕರ್ಮಗಳ ನಿರ್ಜರೆಗೆ ಆತ್ಮ ಚಿಂತನೆಯೇ ಸಾಧನವಾಗಿದೆ. ಆತ್ಮನ ಧ್ಯಾನವಿಲ್ಲದೆ ಕರ್ಮನಿರ್ಜರೆಯಾಗುವುದಿಲ್ಲ, ಕೇವಲಜ್ಞಾವಿಲ್ಲದೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲ, ಹಾಗಾದರೆ ನಾವೇನು ಮಾಡಬೇಕು ? ೨೪ ಘಂಟೆಗಳಲ್ಲಿ ಆರು ಘಳಿಗೆ ಉತ್ತಮ ನಾಲ್ಕು ಘಳಿಗೆ ಮಧ್ಯಮ ಮತ್ತು ಎರಡು ಜಘನ್ಯವೆಂದು ಹೇಳಲಾಗಿದೆ. ಕಮ್ಮಿಯಿಂದ ಕಮ್ಮಿ ೧೦-೧೫ ನಿಮಿಷ ಧ್ಯಾನ ಮಾಡಿರಿ. ನಮ್ಮ ಹೇಳುವಿಕೆಯೆಂದರೆ ಐದು ನಿಮಿಷ ಆದರೂ ಮಾಡಿರಿ. ಆತ್ಮ ಚಿಂತನೆ ಮಾಡಿರಿ, ಆತ್ಮಚಿಂತನೆಯಿಲ್ಲದೆ ಸಮ್ಯಕ್ತ್ವವಾಗುವುದಿಲ್ಲ, ಸಮ್ಯಕ್ತ್ವವಿಲ್ಲದೆ ಕರ್ಮದ ಸಂಸಾರ ಬಂಧನದಿಂದ ಬಿಡುಗಡೆಯಾಗುವುದಿಲ್ಲ, ಜನ್ಮ, ಜರಾ, ಮರಣದಿಂದ ದೂರವಾಗುವುದಿಲ್ಲ, ಸಮ್ಯಕ್ತ್ವವಾದನಂತರ ಮುಂದೆ ಸಂಯಮದ ಹಿಂದೆ ಬೀಳಬೇಕು. ಚಾರಿತ್ರ ಮೋಹನೀಯ ಕರ್ಮದ ಉದಯದಿಂದ ಸಮ್ಯಕ್ತ್ವವಾಗಿ ೬೬ ಸಾವಿರ ವರ್ಷಗಳವರೆಗೂ ಈ ಆತ್ಮನು ಸಂಸಾರದಲ್ಲಿರುವನು, ಮೋಕ್ಷವಾಗುವುದಿಲ್ಲ, ಆದುದರಿಂದ ಚಾರಿತ್ರ ಮೋಹನೀಯ ಕರ್ಮವನ್ನು ನಾಶಮಾಡಲು ಸಂಯಮವನ್ನೇ ಧರಿಸಬೇಕು. ಸಂಯಮವಿಲ್ಲದೆ ಚಾರಿತ್ರ ಮೋಹನೀಯ ಕರ್ಮದ ನಾಶವಾಗುವುದಿಲ್ಲ, ಈ ಸಂಯಮವು ಹೇಗಾದರೂ ಇರಲಿ, ಸಂಯಮ ಇರಬೇಕು. ಹೆದರಬೇಡಿ, ಸಂಯಮ ಧಾರಣೆಯನ್ನು ಮಾಡಲು ಹೆದರಬೇಡಿ. ಸಂಯಮವನ್ನು ಧರಿಸದೇ ಏಳನೆಯ ಗುಣಸ್ಥಾನ ಆಗುವುದಿಲ್ಲ, (ಆತ್ಮನ ಅನುಭವ ಆಗುವುದಿಲ್ಲ) ವಸ್ತ್ರದಲ್ಲಿ ಏಳನೆಯ ಗುಣಸ್ಥಾನವಿಲ್ಲ, ಏಳನೆಯ ಗುಣಸ್ಥಾನ ವಿಲ್ಲದೆ ಆತ್ಮನ ಅನುಭವವಾಗುವುದಿಲ್ಲ, ಆತ್ಮನ ಅನುಭವ



ವಿಲ್ಲದೆ ಕರ್ಮದ ನಿರ್ಜರೆಯಾಗುವುದಿಲ್ಲ, ಕರ್ಮದ ನಿರ್ಜರೆಯಿಲ್ಲದೆ ಕೇವಲಜ್ಞಾನವಾಗುವುದಿಲ್ಲ, ಓಂ ಸಿದ್ಧಾಯ ನಮಃ.

ನಿರ್ವಿಕಲ್ಪ ಸಮಾಧಿ ಮತ್ತು ಸವಿಕಲ್ಪ ಸಮಾಧಿ ಹೀಗೆ ಸಮಾಧಿಯ ಎರಡು ಭೇದಗಳು ಹೇಳಲಾಗಿವೆ. ಗೃಹಸ್ಥರು ವಸ್ತ್ರದಲ್ಲಿ ಸವಿಕಲ್ಪ ಸಮಾಧಿಯನ್ನು ಮಾಡಬಹುದು. ಮುನಿಯಾಗದೆ ನಿರ್ವಿಕಲ್ಪ ಸಮಾಧಿ ಆಗುವುದಿಲ್ಲ, ವಸ್ತ್ರವನ್ನು ಬಿಡದೇ ಮುನಿಪದ ಆಗುವುದಿಲ್ಲ, ಬಂಧುಗಳೇ ಹೆದರಬೇಡಿ! ಮುನಿಪದವನ್ನು ಧಾರಣೆ ಮಾಡಿರಿ. ಯಥಾರ್ಥ ಸಂಯಮವಾಗದೆ ನಿರ್ವಿಕಲ್ಪ ಸಮಾಧಿಯಾಗುವುದಿಲ್ಲ, ನಿರ್ವಿಕಲ್ಪ ಸಮಾಧಿಯಾದರೇನೇ ಸಮ್ಯಕ್ತ್ವವಾಗುತ್ತದೆ. ಹೀಗೆ ಸಮಯಸಾರದಲ್ಲಿ ಕುಂದಕುಂದ ಸ್ವಾಮಿಗಳು ಹೇಳಿದ್ದಾರೆ. ಆತ್ಮಾನುಭವವಿಲ್ಲದೆ ಸಮ್ಯಕ್ತ್ವವಾಗುವುದಿಲ್ಲ, ಉಪಚಾರ ಸಮ್ಯಕ್ತ್ವಕ್ಕೆ ವ್ಯವಹಾರ ಸಮ್ಯಕ್ತ್ವವೆಂದು ಹೇಳಿದ್ದಾರೆ, ಅದು ನಿಜವಾದ ಸಮ್ಯಕ್ತ್ವವಲ್ಲ, ಅದು ಕೇವಲ ಸಾಧನವಾಗಿದೆ. ಫಲ ಬರಲಿಕ್ಕೆ ಪುಷ್ಪವು ಹೇಗೆ ಸಾಧನವೋ ಹಾಗೆಯೇ ವ್ಯವಹಾರ ಸಮ್ಯಕ್ತ್ವವು ಹೇಳಲಾಗಿದೆ, ಅದು ನಿಜವಾದ ಸಮ್ಯಕ್ತ್ವವಲ್ಲ, ನಿಜವಾದ ಸಮ್ಯಕ್ತ್ವವು ಆತ್ಮಾನುಭವದ ನಂತರವೇ ಆಗುತ್ತದೆ.

ಆತ್ಮಾನುಭವ ಯಾವಾಗ ಆಗುತ್ತದೆ ? ನಿರ್ವಿಕಲ್ಪ ಸಮಾಧಿಯಾದನಂತರ ಆಗುತ್ತದೆ. ನಿರ್ವಿಕಲ್ಪ ಸಮಾಧಿ ಯಾವಾಗ ಆಗುತ್ತದೆ ? ಮುನಿಪದ ಧಾರಣೆ ಮಾಡಿದ ನಂತರವೇ ಆಗುತ್ತದೆ. ನಿರ್ವಿಕಲ್ಪ ಸಮಾಧಿಯ ಪ್ರಾರಂಭ ಯಾವಾಗ ಆಗುತ್ತದೆ ? ಏಳನೆಯ ಗುಣಸ್ಥಾನದಲ್ಲಿ ಪ್ರಾರಂಭವಾಗಿ ೧೨ನೆಯ ಗುಣಸ್ಥಾನದಲ್ಲಿ ಪೂರ್ಣವಾಗುತ್ತದೆ. ೧೩ನೆಯ ಗುಣಸ್ಥಾನದಲ್ಲಿ ಕೇವಲಜ್ಞಾನವಾಗುತ್ತದೆ. ಹೀಗೆ ನಿಯಮವಿದೆ. ಶಾಸ್ತ್ರಗಳಲ್ಲಿ ಹೀಗೆ ಹೇಳಿದ್ದಾರೆ ಆದುದರಿಂದ ನೀವು ಹೆದರಬೇಡಿರಿ, ಸಂಯಮ ಧಾರಣೆ ಮಾಡಿರಿ. ಇವೇ ನಮ್ಮ ಕಲ್ಯಾಣವನ್ನು ಮಾಡುವಂಥವು. ಇವಿಲ್ಲದೆ ಕಲ್ಯಾಣವಾಗಲಾರದು. ಸಂಯಮವಿಲ್ಲದೆ ಕಲ್ಯಾಣವಾಗಲಾರದು, ಆತ್ಮಚಿಂತನೆಯಿಲ್ಲದೆ ಕಲ್ಯಾಣವಾಗಲಾರದು. ಪುದ್ಗಲ ಮತ್ತು ಜೀವ ಭಿನ್ನ ಭಿನ್ನವಾಗಿವೆ ಎಂದು ನಿಶ್ಚಯವಾಗಿ ತಿಳಿಯಿರಿ. ನಿಮಗೆ ಸಾಮಾನ್ಯವಾಗಿ ತಿಳಿಯುತ್ತದೆ. ಯತಾರ್ಥ ತಿಳಿಯುವುದಿಲ್ಲ, ಯತಾರ್ಥ ತಿಳಿಯುತ್ತಿದ್ದರೆ ನೀವು ಬಾಹ್ಯ ಪುದ್ಗಲದ ಮೋಹದಲ್ಲಿ ಏಕೆ ಬೀಳುತ್ತಿದ್ದಿರಿ ? ತಂದೆ-ತಾಯಿ, ಮಕ್ಕಳು-ಮರಿಗಳು, ಅಣ್ಣ-ತಮ್ಮಂದಿರು ಇವರೆಲ್ಲರೂ ಪುದ್ಗಲದ ಸಂಬಂಧದವರು. ಜೀವದ ಸಂಬಂಧದವರಂತೂ ಯಾರೂ ಇಲ್ಲ; ಜೀವನೊಬ್ಬನೇ, ಜೀವನೊಬ್ಬನೇ, ಈ ಜೀವನಿಗೆ ಯಾರೂ ಇಲ್ಲ, ಎಷ್ಟೋ ಭವಗಳಲ್ಲಿ ಒಬ್ಬನೇ ಹೋಗುತ್ತಿದ್ದಾನೆ, ಮೋಕ್ಷಕ್ಕೂ ಒಬ್ಬನೇ ಹೋಗುವನು.

ದೇವಪೂಜಾ, ಗುರೂಪಾಸ್ತಿ, ಸ್ವಾಧ್ಯಾಯ, ಸಂಯಮ, ತಪ ಮತ್ತು ದಾನ ಈ ಆರು ಕ್ರಿಯೆಗಳನ್ನು ಹೇಳಲಾಗಿದೆ. ಅಸಿ, ಮಸಿ, ಕೃಷಿ, ವಾಣಿಜ್ಯ, ಶಿಲ್ಪ ವಿದ್ಯಾ ಇವು ಆರು

ವ್ಯವಸಾಯಗಳನ್ನು ಹೇಳಲಾಗಿದೆ. ಈ ಆರು ವ್ಯವಸಾಯಗಳಲ್ಲಿ ಅರ್ಜಿತವಾದ ಪಾಪವನ್ನು ನಾಶಮಾಡುವುದಕ್ಕೋಸ್ಕರವಾಗಿ ಈ ಆರು ಕ್ರಿಯೆಗಳನ್ನು ಆಚರಿಸಬೇಕು. ಇದು ವ್ಯವಹಾರ. ಇದರಿಂದ ನಿಜವಾದ ಮೋಕ್ಷವು ಸಿಗಲಾರದು. ಐಹಿಕ ಸುಖವು ಸಿಗಬಹುದು, ಪಂಚೇಂದ್ರಿಯ ಸುಖವು ಸಿಗಬಹುದು. ಪಂಚಪಾಪಗಳ ತ್ಯಾಗದಿಂದ ಪಂಚೇಂದ್ರಿಯ ಸುಖವು ಸಿಗಬಹುದು, ಮೋಕ್ಷವು ಸಿಗಲಾರದು. ಮೋಕ್ಷವು ಯಾವುದರಿಂದ ಸಿಗಬಹುದು? ಮೋಕ್ಷವು ಮಾತ್ರ ಆತ್ಮಚಿಂತನೆಯಿಂದಲೇ ಸಿಗುತ್ತದೆ. ಬೇರೆ ಯಾವ ಕರ್ಮ, ಕ್ರಿಯೆ, ಕಾರ್ಯ, ಕಾರಣಗಳಿಂದಲೂ ಮೋಕ್ಷವು ಸಿಗಲಾರದು.

ನಯ, ಶಾಸ್ತ್ರ ಅನುಭವ ಈ ಮೂರನ್ನೂ ಕೂಡಿಸಿ ನೋಡಿ, ಮೋಕ್ಷವು ಯಾವುದರಿಂದ ಸಿಗುತ್ತದೆ, ಬೇರೆ ಎಲ್ಲಾ ಇರಲಿ, ನಮ್ಮ ಅನುಭವ ಎಷ್ಟಿದೆ ? ಭಗವಂತನ ದಿವ್ಯ ವಾಣಿಯ ಮುಂದೆ ಅದರ ಬೆಲೆಯಿಲ್ಲ. ಸತ್ಯವಾಣಿಯ ಮೇಲೆ ಪೂರ್ಣ ವಿಶ್ವಾಸವಿಡಬೇಕು. ಈ ವಾಣಿಯ ಒಂದು ಶಬ್ದವನ್ನು ಕೇಳಿದರೂ ಒಂದೇ ಶಬ್ದದಿಂದ ಮುಕ್ತಿಗೆ ಹೋಗುವನು. ಹೀಗೆ ನಿಯಮವಿದೆ. ಆದುದರಿಂದ ಈ ವಾಣಿಯ ಮೇಲೆ ವಿಶ್ವಾಸವಿಡಬೇಕು. ಸತ್ಯವಾಣಿಯೆಂದರೆ ಏನು ? ಆತ್ಮ ಚಿಂತನೆ, ಆತ್ಮಚಿಂತನೆಯಿಂದ ಎಲ್ಲಾ ಕಾರ್ಯಗಳೂ ಸಿದ್ಧಿಸುವುವು. ಅದಲ್ಲದೆ ಏನೂ ಇಲ್ಲವಯ್ಯಾ. ಬೇರೆ ಎಲ್ಲಾ ಕ್ರಿಯೆಗಳಿಂದ ಪುಣ್ಯ ಬಂಧ ಸ್ವರ್ಗಸುಖ ಸಿಗುತ್ತದೆ. ರಾಜ ಪದವಿ ಲಭಿಸುತ್ತದೆ. ಸಂಪತ್ತಿ, ಸಂತತಿ, ವೈಭವಗಳು ದೊರೆಯುತ್ತವೆ. ಆದರೆ ಮೋಕ್ಷ ಸಿಗುವುದಿಲ್ಲ, ಮೋಕ್ಷ ಸಿಗುವುದಿಲ್ಲ, ಮೋಕ್ಷ ಸಿಗಬೇಕಾದರೆ ಕೇವಲ ಆತ್ಮಚಿಂತನೆಯೇ ಸಾಧನವಾಗಿದೆ. ಆದುದರಿಂದ ಅದನ್ನು ಮಾಡಬೇಕಾಗಿದೆ. ಅದಿಲ್ಲದೇ ಸದ್ಗತಿಯಾಗುವುದಿಲ್ಲ.

ಆ ಕ್ರಿಯೆಗಳನ್ನು ಮಾಡಲೇಬೇಕು. ಸಾರಾಂಶ–ಧರ್ಮಸ್ಯ ಮೂಲ ದಯಾ–ಜಿನ ಧರ್ಮದ ಮೂಲವೇನು ? ಸತ್ಯ ಮತ್ತು ಅಹಿಂಸೆ. ಬಾಯಿಯಿಂದ ಸತ್ಯ, ಅಹಿಂಸೆ ಎಂದು ಎಲ್ಲರೂ ಹೇಳುತ್ತೀರಿ, ಆದರೆ ಅದನ್ನು ಪಾಲಿಸುವುದಿಲ್ಲ, ಬಾಯಿಯಿಂದ ಅಡಿಗೆಯ ಮಾಡಿ, ಊಟ ಮಾಡಿ, ಅಡಿಗೆ ಮಾಡಿ ಊಟ ಮಾಡಿ ಎಂದು ಹೇಳಿದ ಮಾತ್ರಕ್ಕೆ ಹೊಟ್ಟೆ ತುಂಬುವುದೋ ? ಕ್ರಿಯೆ ಮಾಡದೆ ಊಟ ಮಾಡದೆ ಹೊಟ್ಟೆ ತುಂಬುವುದಿಲ್ಲ, ಆದುದರಿಂದ ಕ್ರಿಯೆ ಮಾಡಬೇಕು. ಕ್ರಿಯೆ ಮಾಡಿದರೆ ನಮ್ಮ ಕಾರ್ಯವು ಸಾಧ್ಯವಾಗುವುದು. ಉಳಿದ ಎಲ್ಲಾ ಕಾರ್ಯಗಳನ್ನು ಬಿಡಿರಿ. ಸತ್ಯ, ಅಹಿಂಸೆಯನ್ನು ಪಾಲಿಸಿರಿ. ಸತ್ಯದಲ್ಲಿ ಸಮ್ಯಕ್ತ್ವವಿದೆ. ಅಹಿಂಸೆಯಲ್ಲಿ ಯಾವ ಜೀವನಿಗೂ ದುಃಖ ಕೊಡದಿರುವುದರಿಂದ ಸಂಯಮವಿದೆ, ಇದು ವ್ಯವಹಾರದ ಮಾತಾಗಿದೆ. ಈ ವ್ಯವಹಾರವನ್ನು ಪಾಲಿಸಿರಿ. ಸಮ್ಯಕ್ತ್ವವನ್ನು ಧರಿಸಿ. ಸಂಯಮವನ್ನು ಪಾಲಿಸಿರಿ. ಇದರಿಂದ ನಿಮ್ಮ ಕಲ್ಯಾಣವಾಗುತ್ತದೆ. ಅದಿಲ್ಲದೆ ಕಲ್ಯಾಣವಾಗುದಿಲ್ಲ, ಇನ್ನು ಸಾಕು.

---



# ಮಹಾನ್ ಶಾಸಕ ಪ್ರಭಾವಕ ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರು

(ಆಚಾರ್ಯಶ್ರೀ ವಿದ್ಯಾನಂದಜೀ ಮಹಾರಾಜರ ಮೂಲಕ ಪ್ರಸ್ತುತಪಡಿಸಿದ ಪರಿಚಯಾಂಶ) -ಶ್ರೀ ಬಲಭದ್ರ ಜೈನ್

ದಿನಾಂಕ ೧-೨-೦೩. ಅಕ್ಟೋಬರ್ ೧೯೭೨ರಂದು ಕುಂದಕುಂದಭಾರತೀ ಪರಿವಾರದಲ್ಲಿ ಮರಾಠೀ ಜೈನ ಸಾಹಿತ್ಯದ ಸಂಬಂಧದಲ್ಲಿ ಒಂದು ಮಹತ್ವಪೂರ್ಣ ಸಂಗೋಷ್ಠಿಯಲ್ಲಿ ಮರಾಠೀ ಭಾಷೆಯ ಅನೇಕ ಮೂರ್ಧನ್ಯ ಸಾಹಿತ್ಯಕಾರರು ದೂರದೂರದ ಊರಿನಿಂದ ಬಂದಿದ್ದರು. ಈ ಸಂದರ್ಭದಲ್ಲಿ ರಾಷ್ಟ್ರಸಂತ ಆಚಾರ್ಯಶ್ರೀ ವಿದ್ಯಾನಂದಜೀ ಯವರು ಪ್ರಾತಃಸ್ಮರಣೀಯ ಆಚಾರ್ಯ ಶ್ರೀ ಶಾಂತಿಸಾಗರಜೀಯವರ ಪರಿಚಯ ಮಾಡಿಕೊಡುತ್ತಾ ಸ್ವಲ್ಪ ತಿಳುವಳಿಕೆ ನೀಡಿದರು. ಇದರಿಂದ ಹಲವು ಕಡೆಗಳಲ್ಲಿ ಆಚಾರ್ಯ ಶ್ರೀ ಗಳವರ ಬಗ್ಗೆ ಉದ್ದೇಶಪೂರ್ವಕ ಹಬ್ಬುತ್ತಿರುವ ಭ್ರಾಂತಿಯು ದೂರವಾಗಬಹುದೆಂದು ತಿಳಿಯುತ್ತೇವೆ.

ಪರಮಪೂಜ್ಯ ಚಾರಿತ್ರಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರಜೀ ಮಹಾರಾಜರು ಮಹಾನ್ ಶಾಸಕ ಪ್ರಭಾವಕರಾಗಿದ್ದರು. ಅವರು ಸಮಗ್ರ ಭಾರತದಲ್ಲಿ ವಿಹಾರ ಮಾಡುತ್ತಾ ಜನತೆಯಲ್ಲಿ ಜೈನ ಮುನಿಗಳ ಕುರಿತಾದ ಶ್ರದ್ಧೆಯನ್ನು ಪ್ರಜ್ವಲಿತಗೊಳಿಸಿದರು ಮತ್ತು ಸ್ವಯಂ ಸಂಯಮವನ್ನು ನಿರ್ದೋಷವಾಗಿ ಪಾಲನೆ ಮಾಡಿ ಜೈನ ಮುನಿಗಳ ಮಾರ್ಗವನ್ನು ಪ್ರಶಸ್ತಗೊಳಿಸಿದರು. ಅವರು 'ಗುರೂಣಾಂ ಗುರು' ಆಗಿದ್ದರು. ಕೆಲವು ಜನರು ನಿಹಿತ ಸ್ವಾರ್ಥವಶರಾಗಿ ಅವರ ಗುರು ಇತ್ಯಾದಿ ಸಂಬಂಧಗಳಲ್ಲಿ ಭ್ರಮೆ ಹುಟ್ಟಿಸುತ್ತಿದ್ದಾರೆ ಎಂಬ ವಿಚಾರ ನಂಬಿಕೆಯ ಮೂಲಗಳಿಂದ ತಿಳಿದುಬಂದಿದೆ. ನಾವು ೧೯೩೯ ರಿಂದ ೧೯೫೫ರ ವರೆಗೆ ಅವರ ಸಂಪರ್ಕದಲ್ಲಿದ್ದೆವು. ಆದುದರಿಂದಲೇ ನಮಗೆ ಅವರ ವಿಚಾರವಾಗಿ ವಿಸ್ತಾರವಾದ, ಸರಿಯಾದ, ಅಧಿಕೃತವಾದ ಮಾಹಿತಿ ಇದೆ. ಸಲ್ಲೇಖನದ ಸಮಯದಲ್ಲಿ ಕೂಡಾ ನಾವು ಅವರ ಸೇವೆಯಲ್ಲಿದ್ದೆವು. ನಾವು ಅವರ ಬಗ್ಗೆ ಸಮಾಜಕ್ಕೆ ಸಂಕ್ಷೇಪವಾಗಿ ನಿಮ್ಮ ಮಾಧ್ಯಮದಿಂದ ತಿಳುವಳಿಕೆ ನೀಡಲು ಬಯಸುತ್ತೇವೆ.

ಆಚಾರ್ಯ ಶಾಂತಿಸಾಗರರ ಜನನ ವಿ.ಸಂ. ೧೯೨೯ರಲ್ಲಿ ಕರ್ನಾಟಕ ಪ್ರಾಂತ್ಯದ

ಬೆಳಗಾಂ ಜಿಲ್ಲೆಯ ಭೋಜ ಗ್ರಾಮದಲ್ಲಾಯಿತು. ಅವರು ಜನಿಸಿದಾಗ ಇಟ್ಟ ಹೆಸರು ಸಾತಗೌಡ ಪಾಟೀಲ್ ಎಂದಾಗಿತ್ತು. ಅವರು ನಾಲ್ಕನೆಯ ದರ್ಜೆಯವರೆಗೆ ಮಾತ್ರ ಔಪಚಾರಿಕ ಶಿಕ್ಷಣ ಪಡೆದಿದ್ದರು. ವಿ.ಸಂ. ೧೯೬೮ರಲ್ಲಿ ತಮ್ಮ ೩೯ನೇ ವರ್ಷ ಪ್ರಾಯದಲ್ಲಿ ಮಹಾರಾಷ್ಟ್ರದ ಉದಗಾಂನಲ್ಲಿ ಮುನಿ ಆದಿಸಾಗರ್ ಜೀ ಅವರಿಂದ ವ್ರತಪ್ರತಿಮಾ ಸ್ವೀಕರಿಸಿದರು.

ವಿ.ಸಂ. ೧೯೭೦ರಲ್ಲಿ ತಮ್ಮ ೪೧ ವರ್ಷ ಪ್ರಾಯದಲ್ಲಿ ಅವರು ಕರ್ನಾಟಕದ ಉದಗಾಂ ಗ್ರಾಮದಲ್ಲಿ ಮುನಿ ದೇವೇಂದ್ರ ಕೀರ್ತಿಜೀಯವರಿಂದ ಕ್ಷುಲ್ಲಕ ದೀಕ್ಷೆ ಪಡೆದರು. ವಿ.ಸಂ. ೧೯೭೩ರಲ್ಲಿ ತಮ್ಮ ೪೪ ವರ್ಷ ಪ್ರಾಯದಲ್ಲಿ ಗಿರಿನಾರ್ ಕ್ಷೇತ್ರಕ್ಕೆ ಹೋಗಿ ಸ್ವಯಂ ಜಿನೇಂದ್ರ ಪ್ರತಿಮಾದ ಸಮಕ್ಷ ಐಲಕ ದೀಕ್ಷೆ ಸ್ವೀಕರಿಸಿದರು.

ವಿ.ಸಂ. ೧೯೭೪ರಲ್ಲಿ ೪೫ನೇ ವರ್ಷದಲ್ಲಿ ಪರನಾಲದ (ಕರ್ನಾಟಕ) ಪಂಚ ಕಲ್ಯಾಣ ಪ್ರತಿಷ್ಠೆಯ ಸಂದರ್ಭದಲ್ಲಿ ಮುನಿದೀಕ್ಷೆ ಪಡೆದರು. ವಿ.ಸಂ. ೧೯೮೦ರಲ್ಲಿ ೫೧ನೇ ವರ್ಷದಲ್ಲಿ ಮಹಾರಾಷ್ಟ್ರದಲ್ಲಿ ಚತುರ್ವಿಧ ಸಂಘವು ಅವರನ್ನು ಆಚಾರ್ಯ ಪದವಿಯಿಂದ ಸುಶೋಭಿತಗೊಳಿಸಿತು. ಅನಂತರ ಸಲ್ಲೇಖನ ಸ್ವೀಕಾರ ಮಾಡಿದ ಅವರು ತಮ್ಮ ೮೪ನೆಯ ವರ್ಷದ ಆಯಸ್ಸಿನಲ್ಲಿ ಸಮಾಧಿ ಮರಣ ಹೊಂದಿದರು.

---



## ಎಲ್ಲಿ ವೈರಾಗಿಗಳು ವಾಸಿಸುತ್ತಾರೋ ಅದೇ ತಪೋವನ

ಮಹಾನುಭಾವರೇ! 'ಶಾಸ್ತ್ರ' ಶಬ್ದವನ್ನು ಎರಡು ಭಾಗಗಳಲ್ಲಿ ವಿಭಾಗಿಸಲಾಗುತ್ತದೆ. 'ಶಾಸ್' ಮತ್ತು 'ತ್ರ'. 'ಶಾಸ್' ಎಂಬುದರ ಅರ್ಥ ಅನುಶಾಸನ. 'ತ್ರ' ಇದಕ್ಕೆ ಎರಡು ಅರ್ಥಗಳಿವೆ. 'ತ್ರ' ಎಂದರೆ ಮೂರು (ತ್ರಯ) ಮತ್ತು 'ತ್ರ' ಎಂದರೆ ಮತ್ತೊಂದು ಅರ್ಥ ರಕ್ಷೆ. ಈ ರೀತಿಯಾಗಿ ಯಾವುದು ನಮಗೆ ಅನುಶಾಸನವನ್ನು ಕಲಿಸುತ್ತದೋ, ಯಾವುದು ನಮ್ಮ ಆತ್ಮನ ರಕ್ಷಣೆ ಮಾಡುತ್ತದೋ, ಯಾವುದು ಆತ್ಮನ ರಕ್ಷಣೆಯಲ್ಲಿ ನಿಮಿತ್ತವಾಗಿರುತ್ತದೋ ಅದೇ ಶಾಸ್ತ್ರ. ಯಾರು ಪ್ರತಿದಿನವೂ ಮನೆಯಲ್ಲಿ ಶಾಸ್ತ್ರ-ಸ್ವಾಧ್ಯಾಯ ಮಾಡುತ್ತಾರೋ, ಸದಾಚಾರೀ ಜೀವನವನ್ನು ಸಾಗಿಸುತ್ತಾರೋ ಅವರ ಮನೆಯೇ ತಪೋವನ.

**ನಿವೃತ್ತ ರಾಗಸ್ಯ ಗೃಹಂ ತಪೋವನಮ್ ।**

ಕೇವಲ ಕಾಡಿನಲ್ಲಿ ವಾಸಮಾಡಿ ತಪಸ್ಸು ಮಾಡುವ ಸಾಧುಗಳ ಸ್ಥಾನವೇ ತಪೋವನವಲ್ಲ. ಯಾರು ಪ್ರತಿ ದಿನವೂ ಶಾಸ್ತ್ರ-ಸ್ವಾಧ್ಯಾಯ ಮಾಡುತ್ತಾರೋ ಅಂತಹ ಗೃಹಸ್ಥರ ಮನೆಯು ಕೂಡ ತಪೋವನವೇ ಆಗಿರುತ್ತದೆ. ಹಾಗೆಯೇ ಸದಾಚಾರೀ ಜೀವನ ನಡೆಸುವ ಮತ್ತು ಯಾರ ಜೀವನವು ಪ್ರಧಾನವಾಗಿರುತ್ತದೋ ಹಾಗೂ ತ್ಯಾಗಮಯವಾಗಿರುತ್ತದೋ ಅಂತಹವರ ಗೃಹವೂ ಕೂಡಾ ತಪೋವನಕ್ಕೆ ಸರಿಸಮಾನ. ಸಾಮಾನ್ಯವಾಗಿ ಎಲ್ಲಾ ಶಾಸ್ತ್ರಗಳಲ್ಲೂ ಸಮ್ಯಗ್ದರ್ಶನದ ವಿಚಾರ ಚರ್ಚಿಸಲಾಗಿದೆ. ಆದರೆ '**ಲಬ್ಧಿಸಾರ**'ದಲ್ಲಿ ಕೂಡ ವಿಶೇಷ ದೃಷ್ಟಿಯಿಂದ ಹೀಗೆ ಹೇಳಲಾಗಿದೆ:-

**ಖಯಉಸಮಿಯ ವಿಸೋಹೀ ದೇಸಣಪಾಉಗ್ಗಕರಣದ್ಧೀ ವ ಯ ।**
**ಚತ್ತಾರಿ ವಿ ಸಾಮಣ್ಣಾ ಕರಣಂ ಸಮ್ಮತ್ತಚಾರಿತ್ತೇ ॥**

ಪ್ರಾಯೋಗ್ಯಲಬ್ಧಿ, ಕ್ಷಯೋಪಶಮಲಬ್ಧಿ, ವಿಶುದ್ಧಿಲಬ್ಧಿ ಮತ್ತು ದೇಶನಾಲಬ್ಧಿ ಈ ನಾಲ್ಕು ಲಬ್ಧಿಗಳು ಪ್ರಾಯಶಃ ಭವ್ಯ, ಅಭವ್ಯ, ಮಿಥ್ಯಾದೃಷ್ಟಿಗಳಿಗೆ ಉಂಟಾಗುತ್ತದೆ. ಅದಕ್ಕೆ ಸಮ್ಯಕ್‌ಚಾರಿತ್ರದ ರುಚಿಯಿರುತ್ತದೆ. ಯಾವುದಕ್ಕೆ ಸಮ್ಯಕ್‌ಚಾರಿತ್ರದ ಕಡೆಗೆ ಬಾಗುವಿಕೆಯಿರುತ್ತದೋ ಅದಕ್ಕೆ ಮಾತ್ರವೇ ಸಮ್ಯಗ್ದರ್ಶನ ಪ್ರಕಟವಾಗುತ್ತದೆ. ಚಾರಿತ್ರದ ಕಡೆಗೆ ಯಾವುದಕ್ಕೆ ರುಚಿಯಿಲ್ಲವೋ ಮತ್ತು ಉಪೇಕ್ಷೆಯಾಗುತ್ತದೋ ಅದಕ್ಕೆ ಕಾರಣಲಬ್ಧಿ ಇರುವುದಿಲ್ಲ. ಆದಕ್ಕೆ ಸಮ್ಯಗ್ದರ್ಶನವೂ ಇರುವುದಿಲ್ಲ. '**ಕರಣಂ ಸಮ್ಯಕ್‌ಚಾರಿತ್ರಂ**' ಇದರ ವ್ಯುತ್ಪತ್ತಿ ಸ್ವಲ್ಪ ವಿಚಿತ್ರವಾಗಿದೆ. 'ಕ' ಅರ್ಥಾತ್ ಆತ್ಮ 'ರಣ' ಅರ್ಥಾತ್ ಗರಗಸ, ಮರ ಸಿಗಿಯುವ ಸಾಧನ. ಹೇಗೆ ಗರಗಸದ ಹಲ್ಲುಗಳು ಒಂದೇ ಮಗ್ಗುಲಿಗೆ ಬಾಗಿದಂತಿರುತ್ತವೆಯೋ, ಅಂತೆಯೇ ಯಾವಾಗ ದೃಷ್ಟಿಯು ಆತ್ಮನ ಕಡೆಗೆ ವಾಲಿಕೊಂಡಿರುತ್ತದೋ ಆಗ ಕರಣಲಬ್ಧಿ

ಯುಂಟಾಗುತ್ತದೆ. ಹೇಗೆ ಗರಗಸವು ಕಟ್ಟಿಗೆಯನ್ನು ಕತ್ತರಿಸಲು ಸಮರ್ಥವಾಗುತ್ತದೋ, ಅದೇ ಪ್ರಕಾರ ಸಮ್ಯಗ್ದರ್ಶನವು ಕರಣಲಬ್ಧಿಯು ಕರ್ಮಗಳನ್ನು ಕತ್ತರಿಸುವಲ್ಲಿ ಸಮರ್ಥವಾಗುತ್ತದೆ. ಯಾವನು ಚಾರಿತ್ರದ ಕಡೆಗೆ ಮುಖ ಮಾಡಿರುತ್ತಾನೋ, ಆ ವ್ಯಕ್ತಿಗೆ ಈ ಕರಣಲಬ್ಧಿ ಮತ್ತು ಸಮ್ಯಗ್ದರ್ಶನದ ಪ್ರಾಪ್ತಿಯುಂಟಾಗುತ್ತದೆ. ಕವಿ ದೌಲತರಾಮ್‌ಜೀ ಒಂದು ಭಜನೆಯಲ್ಲಿ ಹೀಗೆ ಬರೆದಿದ್ದಾರೆ-

**ಸದನ್ ನಿವಾಸೀ ತದಪಿ ಉದಾಸೀ ತಾತ್ಯೆಂ ಆಸ್ರವ ಛಟಾಛಟೀ ।**

ಯಾವ ವ್ಯಕ್ತಿ ನಿವೃತ್ತಿಭಾವದಿಂದ ಮನೆಯಲ್ಲಿ ಗೃಹಸ್ಥ ಜೀವನದಲ್ಲಿರುತ್ತಾನೋ, ಆದರೆ ಮನಸ್ಸಿನಲ್ಲಿ ನಾನು ಯಾವಾಗ ಸನ್ಯಾಸಿಯಾಗಬಲ್ಲೆ ? ಯಾವಾಗ ಈ ಗೃಹಸ್ಥ ಜೀವನದಿಂದ ಬಿಡುಗಡೆಯಾದೀತು ? ಎಂಬಂತಹ ಭಾವನೆಯಿಂದ ಕೂಡಿದವನಿಗೆ ಸಮ್ಯಗ್ದರ್ಶನದ ಪ್ರಾಪ್ತಿಯುಂಟಾಗಿರುತ್ತದೆ.

**ಗಜಾನಾಮ್ ಪಂಕಮಗ್ನಾನಾಮ್ ಗಜಾ ಇವ ಧುರಂಧರಾ ।**

ಒಂದು ಆನೆಯು ನೀರು ಕುಡಿಯಲು ಸರೋವರಕ್ಕೆ ಹೋಯಿತು. ಆನೆಗೆ ಬಹಳ ಬಾಯಾರಿಕೆಯಾಗಿತ್ತು, ನೀರು ಕುಡಿಯುವ ಆತುರದಿಂದ ಅದು ಜೋರಾಗಿ ಸರೋವರಕ್ಕೆ ಧುಮುಕಿತು ಮತ್ತು ಕೆಸರಿನಲ್ಲಿ ಸಿಕ್ಕಿಕೊಂಡಿತು. ಪ್ರಾಣಾಪಾಯದಲ್ಲಿದ್ದ ಆ ಆನೆಯು ಬೊಬ್ಬೆ ಹೊಡೆಯಿತು. ಅದನ್ನು ಕೇಳಿದ ಕಾಡಿನ ಮೃಗಗಳೆಲ್ಲ ಅಲ್ಲಿ ಒಟ್ಟುಗೂಡಿದವು. ಆದರೆ ಆನೆಯನ್ನು ಎತ್ತಲು ಅವುಗಳಿಗೆ ಸಾಧ್ಯವಾಗಲಿಲ್ಲ, ಅದಕ್ಕಾಗಿ ಅವು ಬೇರೊಂದು ಆನೆಯನ್ನು ಅಲ್ಲಿಗೆ ಕರೆತಂದವು. ಬಂದ ಆನೆಯು ಬಿದ್ದ ಆನೆಯನ್ನು ಎತ್ತಿ ಜೀವವುಳಿಸಿತು. ಹೇಗೆ ಕೆಸರಿನಲ್ಲಿ ಬಿದ್ದ ಆನೆಯನ್ನು ಕೆಸರಿನಿಂದ ಹೊರಗಿದ್ದ ಆನೆಯು ಕಾಪಾಡಿತೋ ಮತ್ತು ತಾನು ಕೆಸರಿನಲ್ಲಿ ಸಿಕ್ಕಿಕೊಳ್ಳಲಿಲ್ಲವೋ ಹಾಗೂ ಇನ್ನೊಂದು ಆನೆಯನ್ನು ಮೇಲೆತ್ತಲು ಸಮರ್ಥವಾಯಿತೋ, ಅಂತೆಯೇ ಒಬ್ಬ ಧರ್ಮಾತ್ಮ ವ್ಯಕ್ತಿಯೇ ಇನ್ನೊಬ್ಬ ವ್ಯಕ್ತಿಯನ್ನು ಧರ್ಮಮಾರ್ಗದ ಕಡೆಗೆ ಉನ್ಮುಖನಾಗುವಂತೆ ಮಾಡಲು ಸಮರ್ಥನಾಗುತ್ತಾನೆ. ಆದುದರಿಂದ ಪ್ರತಿದಿನವೂ ಒಂದು ಪಂಕ್ತಿಯಷ್ಟು ಸ್ವಾಧ್ಯಾಯವನ್ನಾದರೂ ಮಾಡಿರಿ. ಆದರೆ ನಿಯಮಪೂರ್ವಕ ಮಾಡಿರಿ.

ತತ್ತ್ವಜ್ಞಾನದಲ್ಲಿ, ಶಾಸ್ತ್ರದಲ್ಲಿ ಮಹಾನ್ ಶಕ್ತಿ ಇದೆ. ಪರ್ವತಾರೋಹಿಯು ಒಂದು ಸೂತ್ರ (ಹಗ್ಗ)ವನ್ನು ಮೇಲಕ್ಕೆಸೆದು ಕಟ್ಟುತ್ತಾನೆ ಮತ್ತು ಆ ಹಗ್ಗವನ್ನೇ ಹಿಡಿದು ಸ್ವಯಂ ಮೇಲಕ್ಕೆ ಹತ್ತುತ್ತಾನೆ. ಅದೇ ರೀತಿ ನಾವು ಕೂಡಾ ನಮ್ಮ ಧರ್ಮವೆಂಬ ಸೂತ್ರಗಳನ್ನು, ವಾಕ್ಯಗಳನ್ನು, ಶಾಸ್ತ್ರಗಳ ಸೂತ್ರಗಳನ್ನು ನೆನಪಿಸಿಕೊಳ್ಳುತ್ತೇವೆ, ಮನಸ್ಸಿನಲ್ಲಿ ಅಂಕಿತಗೊಳಿಸುತ್ತೇವೆ. ಅವುಗಳ ಅನುಭೂತಿ ಮಾಡಿಕೊಳ್ಳುತ್ತೇವೆ. ಅವುಗಳ ಅರ್ಥಗಳ ಚಿಂತನೆ ಮಾಡುತ್ತೇವೆ. ಹೀಗೆ ಈ ಸೂತ್ರ ಕೂಡಾ ನಮ್ಮ ಜೀವನವನ್ನು ಎತ್ತರಕ್ಕೇರಿಸುವಲ್ಲಿ ಸಹಾಯಕವಾಗುತ್ತದೆ. ಧರ್ಮಾದಿ ಗ್ರಂಥಗಳಲ್ಲಿ ಸೂತ್ರಗಳಿಗೆ "ನಸ್ಸೈನೀ" (ಕಟ್ಟಿಗೆಯ ಮೆಟ್ಟಿಲು)



ಎಂಬ ಶಬ್ದದ ಪ್ರಯೋಗ ಮಾಡಲಾಗಿದೆ. ಹೇಗೆ ನಸ್ಸೈನೀಯು ಮೇಲಕ್ಕೇರುವ ಮಾಧ್ಯಮವಾಗಿದೆಯೋ, ಸಾಧನವಾಗಿದೆಯೋ ಅದೇ ರೀತಿ ಧರ್ಮ ಸೂತ್ರವು ಕೂಡಾ ನಮ್ಮ ಜೀವನವನ್ನು ಉಚ್ಚಸ್ಥಾನಕ್ಕೇರಿಸುವಲ್ಲಿ ಸಹಾಯಕವಾಗುತ್ತದೆ, ಸಾಧನವಾಗುತ್ತದೆ ಹಾಗೂ ಆಧಾರವಾಗುತ್ತದೆ.

ಯಾವ ವ್ಯಕ್ತಿ ನಿವೃತ್ತ ಭಾವನೆಯಿಂದ ಕೂಡಿದ ವ್ಯಕ್ತಿ ಮನೆಯಲ್ಲೇ ಇರುತ್ತಾನೆ, ಸಂಸಾರದ ಕ್ರಿಯಾ-ಕಲಾಪಗಳಲ್ಲಿ ಕೂಡಿಕೊಂಡಿರುತ್ತಾನೆ, ಆದರೆ ಈ ರೀತಿಯಿದ್ದರೂ ಮನಸ್ಸಿನಲ್ಲಿ ಅದರಿಂದ ಬಿಡುಗಡೆ ಹೊಂದಲು ಚಡಪಡಿಸುತ್ತಿರುತ್ತಾನೆ.

ಆಚಾರ್ಯ ಕುಂದಕುಂದರು ಸಮಯಸಾರದಲ್ಲಿ ಒಂದು ಉದಾಹರಣೆ ಕೊಟ್ಟಿದ್ದಾರೆ. ಒಬ್ಬ ಮನುಷ್ಯ ಅನಾರೋಗ್ಯಕ್ಕೆ ತುತ್ತಾದನು. ಚಿಕಿತ್ಸಕನು ಅವನನ್ನು ನೋಡಿ "ಕೆಲವು ದಿನ ಔಷಧಿ ತೆಗೆದುಕೊಳ್ಳಬೇಕಾದೀತು" ಎಂದು ಹೇಳಿ ಔಷಧಿಯನ್ನು ಕೊಟ್ಟನು. ಔಷಧಿ ಕಹಿಯಾಗಿತ್ತು, ರೋಗಿ ನಾಲ್ಕು ದಿನಗಳವರೆಗೆ ಔಷಧಿಯನ್ನು ತೆಗೆದುಕೊಂಡನು. ಆ ಮೇಲೆ ಕೇಳುತ್ತಾನೆ. "ಇನ್ನೆಷ್ಟು ದಿನಗಳ ವರೆಗೆ ಈ ಕಹಿ ಔಷಧಿಯನ್ನು ತೆಗೆದುಕೊಳ್ಳಬೇಕು ? ಯಾವಾಗ ಮುಗಿಯುತ್ತದೆ ಈ ಕಹಿ ಔಷಧಿ ?" ಎಂದು. ಇದೇ ರೀತಿ ಮನೆಯಲ್ಲಿ ಇದ್ದರೂ ಕೂಡಾ ಯಾವಾಗ ಈ ಗೃಹಸ್ಥೀ ಜೀವನ ಮುಗಿಯುತ್ತದೆ ? ಎಂಬ ಭಾವ ಯಾರ ಮನಸ್ಸಿನಲ್ಲಿರುತ್ತದೋ ಅವನ ಮನೆಯು ತಪೋವನವೆಂದೇ ತಿಳಿಯಬೇಕು. ಅವನು ಮನೆಯಲ್ಲೇ ವಾಸಿಸುತ್ತಿರುತ್ತಾನೆ, ಆದರೆ ಮನೆಯ ಬಗ್ಗೆ ಅವನಿಗೆ ಆಸಕ್ತಿಯಿರುವುದಿಲ್ಲ, 'ಇನ್ನು ಸಾಕು, ಇದರಿಂದ ಒಮ್ಮೆ ಬಿಡುಗಡೆ ಸಿಗಲಿ' ಎಂಬ ಭಾವವೇ ನಿವೃತ್ತಿ ಭಾವ.

ಭರತ ಚಕ್ರವರ್ತಿಯು ಆಹಾರಕ್ಕಾಗಿ ಮುನಿರಾಜರನ್ನು ಬಲಗೊಳ್ಳಲು ಸ್ವಲ್ಪ ದೂರದವರೆಗೆ ಬಂದನು. ಮುನಿರಾಜರ ಸಮೀಪಕ್ಕೆ ಬಂದಮೇಲೂ ಭರತನು ಅವರ ಮುಂದೆ ಹಾಗೆಯೇ ನಿಂತುಕೊಂಡನು. ಅವರು ಮುಂದೆ ಹೋಗುತ್ತಿರುವುದನ್ನು ಕೂಡಾ ನೋಡುತ್ತಲೇ ನಿಂತನು. ಆಗ ಚಕ್ರವರ್ತಿಯ ಜೊತೆಯಲ್ಲಿ ಬಂದವರೆಲ್ಲಾ "ಮಹಾರಾಜ್, ಮುನಿರಾಜರು ಮುಂದೆ ಹೋಗಿಬಿಟ್ಟರಲ್ಲಾ ! ಈಗ ನೀವು ಏನು ನೋಡುತ್ತಿದ್ದೀರಿ ? ಏನು ಯೋಚನೆ ಮಾಡುತ್ತಿದ್ದೀರಿ ?" ಎಂದು ಕೇಳಿದರು. ಅದಕ್ಕೆ ಭರತನು "ನಾನು ಅವರ ಹಾಗೆ ಯಾವಾಗ ಆಗಬಲ್ಲೆ ಎಂದು ಯೋಚಿಸುತ್ತಿದ್ದೆ" ಎಂದನು.

ಒಮ್ಮೆ ಭರತನು ಒಬ್ಬರು ಮುನಿಮಹಾರಾಜರನ್ನು ಆಹಾರಕ್ಕಾಗಿ ದೊಡ್ಡದೊಂದು ಮಹಲಿಗೆ ಕರೆದುಕೊಂಡು ಹೋಗಿದ್ದನು. ಆ ಮಹಲು ಬಹಳ ದೊಡ್ಡದಾಗಿತ್ತು, ಎಷ್ಟೋ ಮೆಟ್ಟಿಲುಗಳನ್ನು ಹತ್ತಬೇಕಾಗಿತ್ತು ಮತ್ತು ಇಳಿಯಬೇಕಾಗಿತ್ತು. ಮುನಿ ಮಹಾರಾಜರು ಹೇಳಿದರು- "ರಾಜನ್, ನಿನ್ನ ಮಹಲು ಬಹಳ ಏರು ತಗ್ಗು, ಸುತ್ತು-ಸುತ್ತಾಗಿದೆಯಲ್ಲಾ" ಎಂದರು. ಆಗ ಭರತನು "ಪೂಜ್ಯರೇ, ನನ್ನ ಮನಸ್ಸು ಕೂಡಾ ಹೀಗೆಯೇ ಸುತ್ತು-ಸುತ್ತಾಗಿ ಏರುಪೇರಾಗಿದೆ. ಆದರೆ ತಮ್ಮ ಚರಣಸ್ಪರ್ಶವು ಯಾವಾಗ ಈ ಮಹಲಿನ ಮೇಲಾ

ಯಿತೋ ಆಗ ನನ್ನ ಮನಸ್ಸು ಕೂಡಾ ನೇರವಾಗಿ ನಿರ್ಮಲವಾಯಿತು'' ಎಂದನು. ಇದರ ಬಗ್ಗೆ ಒಬ್ಬ ಕವಿ ಬರೆದಿದ್ದಾನೆ-

**ಸಾಧು ಸಂತ್ ಆವೇ ಘರಾಂ ಹೋವೇ ದೀವಾಲೀ ದಶಹರಾ ।**

ದಶಹರಾ (ದಸರಾ) ಮತ್ತು ದೀಪಾವಳಿಯ ಮಧ್ಯೆ ಇಪ್ಪತ್ತು ದಿನಗಳ ಅಂತರವಿರುತ್ತದೆ. ಈ ಎರಡೂ ಹಬ್ಬಗಳೂ ಬಹಳ ಉಲ್ಲಾಸ ಮತ್ತು ಆನಂದದೊಂದಿಗೆ ಆಚರಿಸಲ್ಪಡುತ್ತವೆ. ಆದರೆ ಯಾವ ದಿನ ಮುನಿರಾಜರ ಚರಣ ಸ್ಪರ್ಶವು ನನ್ನ ಮನೆಯಲ್ಲಾಗುತ್ತದೋ ಆ ದಿನ ದೀಪಾವಳಿ ಮತ್ತು ದಸರಾ ಎರಡೂ ಜೊತೆ-ಜೊತೆಯಾಗಿಯೇ ಬಂದುಬಿಡುತ್ತವೆ. ಅರ್ಥಾತ್ ಆ ದಿನ ದೀಪಾವಳಿ ಮತ್ತು ದಸರಾ ಎಷ್ಟೊಂದು ಸಂತೋಷವನ್ನು ತರಬಲ್ಲದೋ ಅದು ಮನೆಯಲ್ಲಿ ಒಮ್ಮೆಲೇ ಆಗುತ್ತದೆ.

ಮಂದಿರ ಮತ್ತು ಮನೆ, ಇವೆರಡರಲ್ಲಿ ಅಂತರವಿದೆ. ಮನೆಯು ಮಮತೆಯನ್ನು ಹೆಚ್ಚಿಸಿದರೆ, ಮಂದಿರವು ಸಮತೆಯನ್ನು ಹೆಚ್ಚಿಸುತ್ತದೆ. ಮಂದಿರಕ್ಕೆ ಹೆಜ್ಜೆಯಿಟ್ಟೊಡನೆ ಸಮತಾಭಾವವು ಉತ್ಪನ್ನವಾಗುತ್ತದೆ, ವೀತರಾಗಭಾವವು ಉತ್ಪನ್ನವಾಗುತ್ತದೆ, ವೈರಾಗ್ಯ ಹುಟ್ಟಲು ತೊಡಗುತ್ತದೆ ಮತ್ತು ಮನೆಗೆ ಕಾಲಿಟ್ಟೊಡನೆ ಮಮತ್ವಭಾವ, ಮೋಹಭಾವ ಹುಟ್ಟಿಕೊಳ್ಳಲು ತೊಡಗುತ್ತದೆ. ಮನೆ ಮತ್ತು ಮಂದಿರ ಎರಡೂ ಭವನಗಳೇ, ಎರಡೂ 'ಮ'ಕಾರದಿಂದಲೇ ಪ್ರಾರಂಭವಾಗುತ್ತವೆ. ಆದರೆ ಒಂದು ಸಮತೆಯನ್ನು ಸಂಗ್ರಹಿಸುತ್ತದೆ, ಇನ್ನೊಂದು ಮಮತೆಯನ್ನು ಜಾಗೃತಗೊಳಿಸುತ್ತದೆ. ಒಂದು ವೇಳೆ ಮಮತೆಯನ್ನು ಜಾಗೃತಗೊಳಿಸುವ ಮತ್ತು ಹೆಚ್ಚಿಸುವ ಮನೆಯಲ್ಲಿ ಕೂಡಾ ಗೃಹಸ್ಥ ಧರ್ಮದ ಭಾವನೆಯು ಜಾಗೃತವಾಗಿದೆಯೆಂದಾದರೆ, ನಿವೃತ್ತಿಭಾವವು ಕೂಡಿಕೊಂಡಿದೆಯಾದರೆ ಆ ಮನೆಯು ತಪೋವನವೇ ಆಗಿರುತ್ತದೆ.

''ನಾನು ಮೋಸ ಹೋದೆ, ಎಲ್ಲವೂ ಮುಗಿದುಹೋಯಿತು''. ಹೀಗೆ ಜನರು ಹೇಳಿಕೊಳ್ಳುವುದಿದೆ. ಯಾರಿಂದ ಯಾರು ಮೋಸ ಹೋದರು? ಯಾರು ಮನೆ, ಅಂಗಡಿ, ಫ್ಯಾಕ್ಟರಿ, ಧನ-ಸಂಪತ್ತು ಇಷ್ಟೊಂದು ವೈಭವವನ್ನು ಒಟ್ಟುಗೂಡಿಸುತ್ತಾರೋ, ಸ್ವಯಂ ಅದರ ಉಪಯೋಗವನ್ನು ಮಾಡಲಾರರು. ಮತ್ತೆ ಎಲ್ಲವನ್ನೂ ಬಿಟ್ಟು ಹೋಗಿಯೇ ಬಿಡುತ್ತಾರೆ. ಉಳಿದವರು ದುಃಖಿಸುತ್ತಾರೆ. ಎಲ್ಲರ ಅವಸ್ಥೆಯೂ ಇದೇ ಆಗಿದೆ. ಆದ ಕಾರಣ ನಿವೃತ್ತಿ ಭಾವವಿರಬೇಕು.

ನಿವೃತ್ತಿಗೆ ಎಂತಹ ಭಾವವಿರಬೇಕೆಂಬುನ್ನು ರತ್ನಾಕರ ಕವಿ ಹೀಗೆ ಬರೆದಿದ್ದಾನೆ-

**ಶ್ರೀರಾಗಂ ಸಿರಿಗಂಪು ಮಾಲೆ ಮಣಿಹಾರಂ ವಸ್ತ್ರಮಂಗಕ್ಕಳಂ-**
**ಕಾರಂ ಹೇಯಮಿವಾತ್ಮ ತತ್ತ್ವರುಚಿ ಬೋಧೋದ್ಯಚ್ಚರಿತ್ರಂಗಳೀ**
**ತ್ರೈರತ್ನಂ ಮನಸಿಂಗೆ ಸಿಂಗರ ಮುಪಾದೇಯಂಗಳೆಂದಿತ್ತ ಶೃಂ-**
**ಗಾರ ಶ್ರೀಕವಿ ಹಂಸರಾಜನೊಡೆಯಾ ರತ್ನಾಕರಾಧೀಶ್ವರಾ ! ॥**



''ಈ ಪುಷ್ಪ ಮಾಲೆ, ವಸ್ತ್ರ, ಆಭರಣ ಇತ್ಯಾದಿ ಎಷ್ಟೇ ವಸ್ತುಗಳಿರಲಿ, ಅವೆಲ್ಲಾ ಕೇವಲ ಶರೀರದ ಶೃಂಗಾರಕ್ಕಾಗಿಯೇ ಇರುವಂತಹವುಗಳು. ಇವುಗಳಿಂದ ಆತ್ಮನಿಗೆ ಯಾವ ಲಾಭವೂ ಇಲ್ಲ, ಆತ್ಮನ ದೃಷ್ಟಿಯಿಂದ ಅವೆಲ್ಲವೂ ಹೇಯವಾದವುಗಳು. ಅವೆಲ್ಲಾ ಶರೀರದ ಸೌಂದರ್ಯವನ್ನು ಮಾತ್ರ ಹೆಚ್ಚಿಸಬಲ್ಲವು. ಆತ್ಮನಿಗೆ ಅವು ಉಪಾದೇಯಗಳಲ್ಲ, ಅನಾದಿ ಕಾಲದಿಂದಲೂ ನಾವು ಈ ಶರೀರವನ್ನು ಚಿನ್ನದಿಂದ ಅಲಂಕರಿಸುತ್ತಲೇ ಬಂದಿದ್ದೇವೆ. ಅದರ ಬದಲಾಗಿ ಒಮ್ಮೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಆಭರಣವನ್ನು ಧರಿಸಿದೆವೆಂದಾದರೆ ಮತ್ತೊಮ್ಮೆ ಜನ್ಮ ತಾಳುವ ಹಾನಿ ತಪ್ಪೀತು''. ಮನೆಯಲ್ಲಿದ್ದರೂ ಕೂಡ ಯಾವ ವ್ಯಕ್ತಿಗೆ ಈ ರೀತಿಯ ರತ್ನತ್ರಯದ ಆಭರಣ ಧರಿಸುವ ಭಾವನೆಯಿರುತ್ತದೋ, ಅಂಥವನ ಮನೆಯು ತಪೋವನವಾಗಿರುತ್ತದೆ.

ಸೀತೆಯ ತಂದೆಯಾದ ಜನಕ ಮಹಾರಾಜನು ಬಹಳ ದೊಡ್ಡ ಆಧ್ಯಾತ್ಮಿಕ ವ್ಯಕ್ತಿಯಾಗಿದ್ದನು, ಅವನ ರಾಜಮಹಲಿನಲ್ಲಿ ವಿದ್ವಾಂಸರ ಸತ್ಸಂಗ, ತತ್ತ್ವ ಚರ್ಚೆ ಇತ್ಯಾದಿಗಳು ನಡೆಯುತ್ತಲೇ ಇದ್ದವು. ವಿದ್ವಾಂಸರ ಕೂಟದಲ್ಲಿ ಅಷ್ಟಾವಕ್ರ ಎಂಬ ಉಚ್ಚಕೋಟಿಯ ಆಧ್ಯಾತ್ಮಿಕ ವಿದ್ವಾಂಸನೊಬ್ಬನೂ ಇದ್ದ. ಅವನ ಶರೀರದ ಎಂಟು ಸ್ಥಾನಗಳಲ್ಲಿ ಊನಗಳಿದ್ದವು. ಗಂಟಲು, ಕೈ, ಕಾಲು ಇತ್ಯಾದಿಗಳಲ್ಲಿ ಆ ಊನಗಳು ಕಾಣಿಸುತ್ತಿದ್ದವು. ಒಂದು ದಿನ ರಾಜಸಭೆಯಲ್ಲಿ ಅನೇಕ ವಿದ್ವಾಂಸರು ಕುಳಿತಿದ್ದರು. ಆಗಲೇ ಅಷ್ಟಾವಕ್ರನೂ ಅಲ್ಲಿಗೆ ಬಂದನು. ಅಲ್ಲಿ ಕೆಲವು ವಿದ್ವಾಂಸರು ಹೊಸಬರಿದ್ದರು. ಅವರಿಗೆ ಈ ಅಷ್ಟಾವಕ್ರನ ಪರಿಚಯವಿರಲಿಲ್ಲ. ಅವರು ಅಷ್ಟಾವಕ್ರನನ್ನು ನೋಡಿ ನಗಲಾರಂಭಿಸಿದರು. ಆಗಲೇ ಜನಕ ಮಹಾರಾಜನು ರಾಜಸಿಂಹಾಸನದಿಂದೆದ್ದು ಅಷ್ಟಾವಕ್ರನ ಚರಣಗಳಿಗೆ ವಂದಿಸಿದನು. ಉದ್ಬೋಧನ ಕೊಡಲು ಎದ್ದು ನಿಂತ ಅಷ್ಟಾವಕ್ರನು ಸಭೆಯನ್ನು ನೋಡಿ ''ಈ ರಾಜಸಭೆಯು ಸಮಗಾರರ ಸಭೆ'' ಎಂದನು. ಅದನ್ನು ಕೇಳಿದ ವಿದ್ವಾಂಸರು ಬೇಸರಗೊಂಡರು. ಕೂಡಲೇ ಅಷ್ಟಾವಕ್ರನು ಹೇಳಿದನು-''ಸಮಗಾರರ ದೃಷ್ಟಿಯು ಕೇವಲ ಚರ್ಮದ ಕಡೆಗೆ ಮಾತ್ರ ಇರುತ್ತದೆ. ಇಲ್ಲಿ ಕುಳಿತ ನಿಮ್ಮೆಲ್ಲರ ದೃಷ್ಟಿಯೂ ಅಷ್ಟಕ್ಕೇ ಸೀಮಿತಗೊಂಡಿದೆ. ಏಕೆಂದರೆ ನನ್ನನ್ನು ನೋಡಿದವರೆಲ್ಲಾ ನನ್ನ ಎಲುಬು-ಚರ್ಮಗಳನ್ನು ನೋಡಿ ಪ್ರತಿಕ್ರಿಯಿಸಿದಂತಿದೆ. ಈಗ ನೀವು ಸ್ವಯಂ ವಿಚಾರಿಸಿಕೊಳ್ಳಿ, ನೀವು ಯಾರು ?'' ಎಂದು. ಈ ಮಾತನ್ನು ಕೇಳಿದ ಪಂಡಿತರ ಮಾನ ಹೋಯಿತು. ಅಷ್ಟಾವಕ್ರನು ತಮ್ಮನ್ನೇಕೆ ಸಮಗಾರರು ಎಂದನು ಎಂಬುದು ಈಗ ಅವರಿಗೆ ಅರ್ಥವಾಯಿತು.

ಇದೇ ರೀತಿ ನಾವೆಲ್ಲರೂ ಕೂಡಾ ಚರ್ಮದ ಮನೆಯಲ್ಲೇ ವಾಸಿಸುತ್ತಿದ್ದೇವೆ. ಅದಕ್ಕೇ ಮಹತ್ವ ಕೊಡುತ್ತೇವೆ. ನಾವು ಶರೀರಕ್ಕೆ ಮಹತ್ವ ಕೊಡುತ್ತೇವೆ, ಸಮಸ್ತವೂ ಶರೀರವೇ ಎಂದು ತಿಳಿದಿದ್ದೇವೆ. ಶರೀರದಲ್ಲಿ ಅತ್ಯಂತ ಶಕ್ತಿಶಾಲಿ ಜ್ಞಾನಿಯಾದ ಆತ್ಮನಿದ್ದಾನೆ. ಅವನಿಂದಲೇ ಜ್ಞಾನದ ಸುವಾಸನೆ ಹೊರಡುತ್ತದೆ. ಆದರೆ ನಾವು ಅದನ್ನು ಗುರುತಿಸಿಲ್ಲ, ಅದನ್ನು ನೋಡಲಿಲ್ಲ, ಕೇವಲ ಶರೀರವನ್ನೇ ನೋಡುತ್ತೇವೆ. ಆದ ಕಾರಣ ನಾವೆಲ್ಲಾ ಸಮಗಾರರೇ ಆಗಿದ್ದೇವೆ.

ಒಬ್ಬ ಸಮಗಾರನಿದ್ದ, ಚಪ್ಪಲಿ ಹೊಲೆಯುತ್ತಿದ್ದ, ಚಪ್ಪಲಿ ಹೊಲೆಯುವ ಸಮಯದಲ್ಲಿ ಚರ್ಮವನ್ನು ಕಟ್ಟಿಗೆಯ ತುಂಡಿನಿಂದ ಹೊಡೆಯುತ್ತಿದ್ದ. ಆ ಹೊಡೆತದಿಂದಾಗಿ ಕಟ್ಟಿಗೆಯ ತುಂಡು ಅಡ್ಡಾದಿಡ್ಡಿಯಾಗಿ ತನ್ನ ಆಕಾರ ಕಳೆದುಕೊಂಡಿತು. ಆಗ ಸಮಗಾರನು ಆ ಕಟ್ಟಿಗೆಯ ತುಂಡನ್ನು ಸರಿಪಡಿಸಿಕೊಡಲು ಒಬ್ಬ ಬಡಗಿಗೆ ಕೊಟ್ಟನು. ಬಡಗಿಯು ಅದನ್ನು ಉಳಿಯಿಂದ ಸೀಳಿ ಸರಿಪಡಿಸುವಾಗ ಅದರಿಂದ ಸುವಾಸನೆ ಹೊರಟಿತು. ಯಥಾರ್ಥಕ್ಕಾದರೆ ಅದು ಗಂಧದ ಮರದ ತುಂಡಾಗಿತ್ತು. ಆದರೆ ಅದನ್ನು ತಿಳಿಯದ ಸಮಗಾರನು ಅದರಿಂದ ಚರ್ಮಕ್ಕೆ ಹೊಡೆಯುತ್ತಿದ್ದ. ಬಡಗಿ ಹೇಳುತ್ತಾನೆ;-

**ಚಂದನ್ ಪಡೇ ಚಾಮ್ ಘರ್, ಪ್ರತಿದಿನ್ ಕೂಟೇ ಚಾಮ್ ।**
**ಚಂದನ್ ಬಿಚಾರಾ ಕ್ಯಾಕರೇ, ಪಡೇ ನೀಚ್‌ಕೇ ಧಾಮ್ ॥**

**ಅರ್ಥ:-** ಚಂದನ ಅಥವಾ ಶ್ರೀಗಂಧವು ಕೂಡಾ ಚರ್ಮದ ಸಹವಾಸದಿಂದ ಎಂದರೆ ಚರ್ಮಕ್ಕೆ ಹೊಡೆಯುವ-ಕಾರಣದಿಂದ ದುರ್ವಾಸನೆಗೊಳಗಾಗುತ್ತದೆ. ಇಂತಹ ಚರ್ಮದ ಮನೆಯಲ್ಲಿ ವಾಸಿಸುವುದರಿಂದ ಶಕ್ತಿಶಾಲಿಯಾದ ಆತ್ಮನಲ್ಲಿ ಕೂಡಾ ಪಾಪದ ದುರ್ವಾಸನೆ ಬರಲು ತೊಡಗುತ್ತದೆ.

ಶರೀರದ ಶೃಂಗಾರವು ಆತ್ಮನಿಗೆ ಯಾವುದೇ ಕೆಲಸಕ್ಕೂ ಬರುವುದಿಲ್ಲ. ಅದರಿಂದ ಆತ್ಮನಿಗೆ ಯಾವ ಲಾಭವೂ ಇಲ್ಲ. ಹಾಗೆ ನೋಡಿದರೆ ಅವು ಆತ್ಮನಿಗೆ ಹೇಯವಾದವುಗಳು. ಎಷ್ಟೇ ಶಾಸ್ತ್ರಗಳನ್ನು ಓದಿದರೂ ಹೇಯ-ಉಪಾದೇಯದ ಮತ್ತು ಯಾವುದನ್ನು ಗ್ರಹಣ ಮಾಡಬೇಕು ಹಾಗೂ ಯಾವುದನ್ನು ಬಿಡಬೇಕು ಎಂಬುದರ ಜ್ಞಾನವಿಲ್ಲದೆ ಹೋದರೆ ಶಾಸ್ತ್ರ ಓದಿದ್ದು ವ್ಯರ್ಥವೇ ಸರಿ.

ಒಂದು ಹಳ್ಳಿಯಲ್ಲಿ ಚಾತುರ್ಮಾಸದ ವೇಳೆ ಒಬ್ಬರು ಪಂಡಿತರು ಬಂದರು. ಅವರು ರಾಮಾಯಣ ಓದಿ ವಿವರಿಸುತ್ತಿದ್ದರು. ಶ್ರೋತೃಗಳು ಕೇಳುತ್ತಿದ್ದರು. ಶ್ರೋತೃಗಳಲ್ಲಿ ಇಬ್ಬರು ಮಾತ್ರ ಎಲ್ಲರಿಗಿಂತ ಮೊದಲು ಬಂದು ಕುಳಿತುಕೊಳ್ಳುತ್ತಿದ್ದರು. ಚಾತುರ್ಮಾಸ ಮುಗಿಯಿತು. ಪಂಡಿತ್‌ಜೀ ಹೇಳಿದರು-''ಯಾರಿಗಾದರೂ ಯಾವುದಾದರೂ ಸಂದೇಹವಿದ್ದರೆ ಕೇಳಿರಿ''. ಆಗ ಆ ಇಬ್ಬರಲ್ಲಿ ಒಬ್ಬರು ''ಪಂಡಿತ್‌ಜೀ, ಸೀತೆಯು ರಾಮನ ತಂಗಿಯಾಗಿದ್ದಳೋ ಅಥವಾ ಪತ್ನಿಯಾಗಿದ್ದಳೋ ?'' ಎಂದು ಕೇಳಿದರು. ಆಗ ಪಂಡಿತ್‌ಜೀ ಕೇಳಿದರು- ''ಅರೆ, ಪ್ರತಿನಿತ್ಯ ಎಲ್ಲರಿಗಿಂತ ಮೊದಲು ಬಂದು ಮುಂದೆ ಕುಳಿತು ಪ್ರವಚನ ಕೇಳುತ್ತಿದ್ದಿರಿ, ಈಗ ಎಂತಹ ಪ್ರಶ್ನೆ ಹಾಕಿದಿರಿ ?

ಕೇವಲ ಸಭೆಗೆ ಬಂದು ಕುಳಿತ ಮಾತ್ರಕ್ಕೆ ಏನೂ ಆದಂತಿಲ್ಲ, ಕೇಳಬೇಕು. ಕೇವಲ ಕೇಳುವುದರಿಂದಲೂ ಏನೂ ಆಗದು. ಅದರ ಅರ್ಥವೇನೆಂದು ತಿಳಿಯಬೇಕು. ಅರ್ಥ ತಿಳಿದ ಮೇಲೆ ಅದನ್ನು ಹೃದಯಕ್ಕೆ ಇಳಿಸುವುದೂ ಅವಶ್ಯಕ. ಆಗಲೇ ಅದರಿಂದ ಲಾಭವಾಗುವುದು. ನೀವು ಪ್ರತಿದಿನವೂ ಮಾವಿನ ಹಣ್ಣುಗಳೇ ಮೊದಲಾದ ಫಲಗಳನ್ನು ತಿನ್ನುತ್ತೀರಿ.



ಆದರ ಸಿಪ್ಪೆ ಮತ್ತು ಗೊರಟನ್ನ ಎಸೆಯುತ್ತೀರಿ. ರಸ-ಸಾರ ಗ್ರಹಣ ಮಾಡುತ್ತೀರಿ. ಅದೇ ರೀತಿ ಶಾಸ್ತ್ರಕ್ಕಿಂತಲೂ ಮೇಲಿನ ಮಾತುಗಳ ಬಗ್ಗೆ ವಿವಾದ ಮಾಡದೆ ಸಾರ ಗ್ರಹಣ ಮಾಡಬೇಕು; ಆತ್ಮ ಕಲ್ಯಾಣ ಮಾಡಿಕೊಳ್ಳಬೇಕು.

ಆದ ಕಾರಣವೇ ಮನೆಯಲ್ಲಿ, ಗೃಹಸ್ಥಾಶ್ರಮದಲ್ಲಿ ಇದ್ದರೂ ಕೂಡಾ ಯಾರಲ್ಲಿ ವಿರಕ್ತ ಭಾವವಿರುತ್ತದೋ, ವೈರಾಗ್ಯ ಭಾವವಿರುತ್ತದೋ ಅವರ ಮನೆಯೇ ತಪೋವನವೆಂದು ಮೇಲಿಂದ ಮೇಲೆ ಹೇಳಲಾಗಿದೆ. ನೀವೂ ಕೂಡಾ ನಿಮ್ಮ ಮನೆಯನ್ನು ತಪೋವನವನ್ನಾಗಿ ಮಾಡಿರಿ. ನಮ್ಮ ಆಚಾರ್ಯರು 'ವಿರಕ್ತರಾಗಿರಿ, ಎಲ್ಲವನ್ನೂ ಬಿಟ್ಟು ಮುಂದೆ ಬನ್ನಿ' ಎಂದು ಮೊದಲೇ ಹೇಳಿದರು. ಅದು ಸಾಧ್ಯವಾಗದಿದ್ದರೆ ಸಂಸಾರದಲ್ಲೇ ಇರಿ, ಆದರೆ ಅಲ್ಲಿ ಹೇಗಿರಬೇಕೆಂದರೆ ಅದರಿಂದ ಅನಂತ ಸಂಸಾರಭ್ರಮಣ ಆಗದಂತಿರಲಿ ಎಂದು ಕೂಡಾ ಹೇಳಿದರು. ಒಟ್ಟಿನಲ್ಲಿ ನಿಮಗೆ ದುರ್ಗತಿ-ನರಕಾದಿಗಳು ಬಾರದಂತಿರಲಿ ಎಂಬುದೇ ಅವರ ಆಶಯ. ಗೃಹಸ್ಥಾಶ್ರಮದಲ್ಲೂ ನೀವು ಸದ್‌ಗೃಹಸ್ಥರಾಗಿರಿ. ಸಿಹಿ ತಿನ್ನುವುದನ್ನು ಯಾರೂ ನಿರಾಕರಿಸುವುದಿಲ್ಲ, ಆದರೆ ಎಷ್ಟು ತಿನ್ನಬೇಕೆಂದರೆ ಅದು ಪಚನವಾಗುವಷ್ಟು ಮಾತ್ರ. ಜೀರ್ಣವಾಗದೆ ಹೊಟ್ಟೆಯಲ್ಲಿ ಹಿಡಿಯುವಷ್ಟು ತಿಂದು ಅದರಿಂದ ಹೊಟ್ಟೆಯಲ್ಲಿ ಜಂತು ಹುಳುಗಳು ಹುಟ್ಟಿಕೊಂಡು ಆರೋಗ್ಯ ಕೆಡುವಂತೆ ಮಾಡಿಕೊಳ್ಳಬಾರದೆಂಬುದೇ ಇದರ ತಾತ್ಪರ್ಯ. ಆದ ಕಾರಣವೇ ಉಪನಿಷತ್ತಿನಲ್ಲಿ ''ತೇನತ್ಯಕ್ತೇನ ಭುಂಜೀಥ'' ಎಂದು ಹೇಳಲಾಗಿದೆ. ಇದರ ಅರ್ಥ ತ್ಯಾಗಪೂರ್ವಕ ಭೋಗಿಸು, ಅದರಲ್ಲಿ ಗೃದ್ಧತಾ ಇಡಬೇಡ. ಶರೀರಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಗ್ರಹಣ ಮಾಡು.

ಸಮಯಸಾರದಲ್ಲಿ ಈ ಮಾತನ್ನು ಹೀಗೆ ಹೇಳಲಾಗಿದೆ. ಹೇಗೆ ಕಹಿ ಗುಳಿಗೆಯನ್ನು ಸೇವಿಸುವ ವ್ಯಕ್ತಿ ಈ ಗುಳಿಗೆಯು ಎಂದು ಮುಗಿಯುತ್ತದೋ ? ಎಂದು ಹೇಗೆ ಯೋಚಿಸುತ್ತಾನೋ, ಹಾಗೆಯೇ ಯಾರಲ್ಲಿ ಈ ಗೃಹಸ್ಥಿಯು ಯಾವಾಗ ಮುಗಿಯುತ್ತದೋ ಎಂಬ ವೈರಾಗ್ಯ ಭಾವನೆ ಮೂಡುತ್ತದೋ ಅವರ ಮನೆ ತಪೋವನ. ಅವರನ್ನು ಬಟ್ಟೆಯಿಂದ ಶರೀರವನ್ನು ಮುಚ್ಚಿಕೊಂಡ ಸಾಧುವೆಂದು, ತಪಸ್ವಿಯೆಂದು ತಿಳಿಯಬೇಕು. ಅದು ಅಸಂಭವವೇನಲ್ಲ.

ಒಬ್ಬ ಮಹಿಳೆಯಿದ್ದಳು. ಅವಳಿಗೆ ಮಕ್ಕಳಿರಲಿಲ್ಲ. ಅವಳು ''ನನ್ನ ಮನೆಯನ್ನು ಬೆಳಗುವಂತಹ ಜ್ಯೋತಿ ಹುಟ್ಟಲಿಲ್ಲವಲ್ಲಾ! ಯಾವನೇ ಕುಲದೀಪಕನೂ ಆವಿರ್ಭವಿಸಲಿಲ್ಲವಲ್ಲಾ! ಎಂದು ಚಿಂತಿತಳಾಗಿದ್ದಳು. ಆದರೆ ಹನ್ನೆರಡು ವರ್ಷ ಕಳೆದ ಮೇಲೆ ಅವಳಿಗೆ ಒಬ್ಬ ಮಗ ಹುಟ್ಟಿದ. ಎಷ್ಟೋ ವರ್ಷಗಳ ಬಳಿಕ ಹುಟ್ಟಿದ ಮಗನೆಂದ ಮೇಲೆ ಕೇಳಬೇಕೇ? ಆ ಮಗನನ್ನು ಅತ್ಯಂತ ಪ್ರೀತಿಯಿಂದ ಸಾಕುತ್ತಿದ್ದಳು. ರಾತ್ರಿ ಹೊತ್ತಿನಲ್ಲೂ ಆ ಮಗನನ್ನು ಮುದ್ದಾಡುವ ಆತುರದಿಂದ ಎಬ್ಬಿಸಿ ಪ್ರೀತಿ ತೋರುತ್ತಿದ್ದಳು. ಆದರೆ ವಿಧಿ ವಿಲಾಸ ಬೇರೆಯೇ ಆಗಿತ್ತು. ಆ ಮಗು ಆರು ತಿಂಗಳ ಬಳಿಕ ಸತ್ತುಹೋಯಿತು. ಈ ದುಃಖವನ್ನು ಸಹಿಸಲಾರದ ತಾಯಿ ಹಿಂದಿನ ಅಭ್ಯಾಸದಂತೆ ಮಗು ಜೀವಂವಿದೆ ಎಂದೇ

ತಿಳಿಯುತ್ತಾ ರಾತ್ರಿ ಕೂಡಾ ಎದ್ದು ಅದನ್ನು ಪ್ರೀತಿಸಿದಂತೆ ಮಾಡಿ ಮಲಗುತ್ತಿದ್ದಳು. ಆರು ತಿಂಗಳ ಕಾಲ ಮಗುವನ್ನು ಎಬ್ಬಿಸಿ ಆಡಿಸುವ ಕ್ರಮವನ್ನಿಟ್ಟಿದ್ದ ಆಕೆಗೆ ಅದು ಅಭ್ಯಾಸವಾಗಿ ಹೋಗಿತ್ತು.

ಇದೇ ರೀತಿ ಒಮ್ಮೆ ಆಧ್ಯಾತ್ಮದ ಚಟ ಹಿಡಿಯಿತೆಂದಾದರೆ ಆ ವಿರಕ್ತಭಾವಗಳು ಯಾವಾಗಲೂ ನಿಮ್ಮನ್ನು ಜಾಗೃತಗೊಳಿಸುವುವು. ಗೃಹಸ್ಥಾಶ್ರಮದಲ್ಲಿ ಇದ್ದರೂ ಕೂಡಾ ಕರ್ಮಬಂಧವಾಗದಂತೆ ಅವು ನೋಡಿಕೊಳ್ಳುತ್ತವೆ.

**''ಯಹ್ ರಾಗ್ ಆಗ್ ದಹೈ ಸದಾ, ತಾತೈ ಸಮಾಮೃತ್ ಸೆ ಹೈ !''**

ಸಮತಾಭಾವವು ರಾಗವನ್ನು ಸಮಾಪ್ತಗೊಳಿಸುತ್ತದೆ. 'ಜ್ಞಾನಾರ್ಣವ'ದಲ್ಲಿ ಸಮತಾ ಭಾವದ ಉದಾಹರಣೆಗಳು ದೃಷ್ಟವ್ಯವಾಗಿವೆ.

ರಾಜಗೃಹೀ ಕಾಡಿನಲ್ಲಿ ಯಶೋಧರ ಎಂಬ ಮುನಿ ತಪಸ್ಸು ಮಾಡುತ್ತಿದ್ದರು. ಒಮ್ಮೆ ಅವರು ಧ್ಯಾನದಲ್ಲಿ ಲೀನರಾಗಿದ್ದರು. ಅದೇ ವೇಳೆಗೆ ರಾಜಾ ಶ್ರೇಣಿಕನು ಬೇಟೆಯಾಡುತ್ತಾ ಅಲ್ಲಿಗೆ ಬಂದಿದ್ದನು. ಅವನು ಅಹಂಕಾರದಿಂದ ಆ ಮುನಿಯ ಕೊರಳಿಗೆ ಸತ್ತ ಹಾವನ್ನು ಹಾಕಿ ಹೊರಟು ಹೋದನು. ರಾಜ ಮಹಲಿಗೆ ಬಂದ ಅವನು ಈ ವಿಚಾರವನ್ನು ತನ್ನ ರಾಣಿಯಾದ ಚೇಲನಾಳಿಗೆ ಹೇಳಿದನು. ಚೇಲನಾ ಹೇಳಿದಳು – ''ನೀವು ಎಂಥಹ ಕೆಲಸ ಮಾಡಿದಿರಿ ? ಮುನಿ ಮಹಾರಾಜರ ಮೇಲೆ ಉಪಸರ್ಗ ಮಾಡುವುದೇ ? ಈಗಲೇ ನೀವು ನನ್ನನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಿರಿ''. ಅದರಂತೆ ಆಕೆ ರಾಜಾ ಶ್ರೇಣಿಕನೊಂದಿಗೆ ಆ ಧ್ಯಾನಾವಸ್ಥೆಯಲ್ಲಿ ಕುಳಿತಿದ್ದ ಮುನಿ ಮಹಾರಾಜರಿದ್ದಲ್ಲಿಗೆ ಬಂದಳು. ಸತ್ತ ಹಾವನ್ನು ಕೊರಳಿಗೆ ಹಾಕಿದ ಕಾರಣ ಮುನಿಗಳ ಶರೀರದ ಮೇಲೆ ಅಸಂಖ್ಯಾತ ಇರುವೆಗಳು ಓಡಾಡುತ್ತಿದ್ದವು. ರಾಣಿ ಚೇಲನಾ ಮುನಿಗಳ ಶರೀರದ ಮೇಲೆ ಹರಿದಾಡುತ್ತಿದ್ದ ಜಂತುಗಳನ್ನು ತೆಗೆಸಿದಳು. ಉಪಸರ್ಗ ದೂರವಾದಾಗ ಧ್ಯಾನಸ್ಥರಾಗಿದ್ದ ಮುನಿಗಳು ಧ್ಯಾನದಿಂದ ವಿರಮಿಸಿ ಮೇಲಕ್ಕೆದ್ದರು. ರಾಜ ಶ್ರೇಣಿಕ ಮತ್ತು ರಾಣಿ ಚೇಲನಾ ಇಬ್ಬರೂ ಅವರಿಗೆ ಪ್ರಣಾಮ ಮಾಡಿದರು. ಅದಕ್ಕೆ ಮುನಿಗಳು ''ಧರ್ಮ ವೃದ್ಧಿರಸ್ತು'' ಎಂದು ಆಶೀರ್ವದಿಸಿದರು. ಅವರ ಆಶೀರ್ವಾದವನ್ನು ಆಲಿಸಿದ ರಾಜನ ಕಣ್ಣುಗಳಲ್ಲಿ ನೀರೂರಿತು. ''ನಾನು ಉಪಸರ್ಗ ಮಾಡಿದ್ದೆ, ಈ ಉಪಸರ್ಗವನ್ನು ರಾಣಿ ನಿವಾರಿಸಿದಳು. ಆದರೂ ಇಬ್ಬರಿಗೂ ಮುನಿಗಳು ಆಶೀರ್ವಾದ ನೀಡಿದರು. ಅದರಲ್ಲೂ ಉಪಸರ್ಗ ನಿವಾರಣೆ ಮಾಡಿದಾಕೆಗೆ ಮೊದಲು ಆಶೀರ್ವಾದ ಮಾಡಲಿಲ್ಲ, ಅವರ ಮನಸ್ಸಿನಲ್ಲಿ ಇಬ್ಬರ ಬಗ್ಗೆಯೂ ಸಮತಾಭಾವ. ಆಹಾ ! ಇದು ಎಂತಹ ಸಮತಾಭಾವ !''. ಹೀಗೆ ಮನಸ್ಸಿನಲ್ಲಿಯೇ ಹೇಳಿಕೊಂಡ ರಾಜ ಶ್ರೇಣಿಕನ ದೃಷ್ಟಿ ಬದಲಾಯಿತು. ವಿಚಾರ ಬದಲಾಯಿತು.

ಸಮತೆಯಲ್ಲೂ ಸಾಮಾಯಿಕವು ನಿಹಿತವಾಗಿದೆ. ಸಮತೆಯಲ್ಲೇ ಧರ್ಮಧ್ಯಾನ ನಿಹಿತವಾಗಿದೆ, ಸಮತೆಯಲ್ಲೇ ಶಾಂತಿ ಇರುತ್ತದೆ. ಶಾಂತಿಯು ಅಂಗಡಿಯಲ್ಲಿ



ಸಿಗುವಂತಹುದಲ್ಲ, ಆದ ಕಾರಣವೇ ನಾವು ಕೂಡಾ ಸಮತಾಭಾವಿಗಳಾಗೋಣ, ಸಮತಾ ಭಾವಿಯಾಗುವುದಕ್ಕಾಗಿಯೇ ನಾವು ನಮ್ಮನ್ನು ಗುರುತಿಸಿಕೊಳ್ಳೋಣ, ನಮ್ಮ ಆತ್ಮನನ್ನು ಗುರುತಿಸೋಣ, ತತ್ತ್ವಜ್ಞಾನವನ್ನು ತಿಳಿಯೋಣ. ಶರೀರ ಮತ್ತು ಆತ್ಮ ಇವೆರಡೂ ಭಿನ್ನ ಪದಾರ್ಥಗಳು. ಶರೀರದ ಕುರಿತಾಗಿ ವಿಜ್ಞಾನಿಗಳು ಅನೇಕ ಪರೀಕ್ಷಣಗಳನ್ನು ಮಾಡಿ, ತಿಳುವಳಿಕೆ ನೀಡಿದ್ದಾರೆ. ಆದರೆ ಆತ್ಮನನ್ನು ಅವರೂ ತಿಳಿಯಲಿಲ್ಲ, ರತ್ನ ವ್ಯಾಪಾರಿಯು ನಾನಾ ರೀತಿಯಿಂದ ಸಂಶೋಧನೆ ಮಾಡಿ ರತ್ನವನ್ನು ಹುಡುಕುತ್ತಾನೆ. ಸಮುದ್ರಕ್ಕೆ ಮುಳುಗು ಹಾಕಿಯೂ ರತ್ನವನ್ನು ತೆಗೆಯಲಾಗುತ್ತದೆ. ಭೂಮಿಯಿಂದಲೂ ರತ್ನವನ್ನು ತೆಗೆಯಲಾಗುತ್ತದೆ. ಆದರೆ ಒಳಗೆ ಅಡಗಿರುವ ಈ ಆತ್ಮ-ರತ್ನವನ್ನು ಅವರು ಕಂಡುಹಿಡಿದಿಲ್ಲ.

ಒಬ್ಬ ಜ್ಞಾನೀ-ಪಂಡಿತ್ ತಿರುಗಾಡಲು ವಿದೇಶಕ್ಕೆ (ಲಂಡನ್ನಿಗೆ) ಹೋದ. ಅಲ್ಲಿ ಹೋದವನು ''ಇಲ್ಲಿ ಏನಾದರೂ ದರ್ಶನೀಯ ದುರ್ಲಭ ವಸ್ತುವಿದೆಯೇ ?'' ಎಂದು ಕೇಳಿದನಂತೆ, ಹೌದು, ಇದೆ.'' ಎಂದರು. ''ಏನದು'' ಎಂದು ಕೇಳಿದ. ಅದಕ್ಕೆ ಅಲ್ಲಿಯವರು ''ನಮ್ಮಲ್ಲಿ ದುರ್ಲಭವಾದ ಕೋಹಿನೂರ್ ವಜ್ರವಿದೆ'' ಎಂದು ಹೇಳಿದರು. ಪಂಡಿತ್‌ಜೀ ಕೇಳಿದರು ''ವಜ್ರ ಅಷ್ಟು ಬೆಲೆಯುಳ್ಳದ್ದೋ? ಅಥವಾ ಅದನ್ನು ನೋಡುವ ಕಣ್ಣಿದೆಯಲ್ಲಾ, ಆ ಕಣ್ಣು ಬೆಲೆಯುಳ್ಳದ್ದೋ ?'' ಕಣ್ಣುಗಳಿಲ್ಲದಿದ್ದರೆ ವಜ್ರ ಹೇಗೆ ಕಾಣುತ್ತದೆ ?'' ಆದರೆ ಕಣ್ಣುಗಳು ಹಣಕ್ಕೂ ಇರಬಹುದು. ಆಗ ಕೂಡಾ ಅದರಿಂದ ನೋಡಲಾಗುವುದಿಲ್ಲ, ಇದರಿಂದ ಏನು ತಿಳಿಯುವುದೆಂದರೆ ! ಅಲ್ಲಿ ಕಣ್ಣಿಗೆ ಕೂಡಾ ಬೆಲೆಯಿಲ್ಲ, ಬೆಲೆಯಿರುವುದು ಆತ್ಮನಿಗೆ ಮಾತ್ರ. ಆದ ಕಾರಣ ಆತ್ಮನನ್ನು ತಿಳಿಯಬೇಕು. ಆತ್ಮನನ್ನು ಗುರುತಿಸಬೇಕು, ಹಾಗಾದರೆ ಆತ್ಮನನ್ನು ಗುರುತಿಸಲು ಎಂತಹ ಪ್ರಯಾಸ ಮಾಡಬೇಕಾಗಿದೆ ?

**ಯೇ ಅಭ್ಯಾಸಂತಿ ಕಥಯಂತಿ ವಿಚಾರಯಂತಿ**
**ಸಂಭಾವಯಂತಿ ಚ ಮುಹುರ್ಮುಹುರಾತ್ಮತತ್ತ್ವಮ್ ।**

ಹೀಗೆ ನಿತ್ಯವೂ ಆತ್ಮನ ಬಗ್ಗೆ ಸೂಕ್ಷ್ಮ ಚರ್ಚೆ ಕೈಗೊಳ್ಳಿರಿ.

**ತೇ ಮೋಕ್ಷಮಕ್ಷಯಮನೂನಮನಂತ ಸೌಖ್ಯಮ್ ।**
**ಕ್ಷಿಪ್ರಂ ಪ್ರಯಾಂತಿ ನವಕೇವಲ ಲಬ್ಧಿರೂಪಮ್ ॥**

ಪರಸ್ಪರ ಅನೇಕ ಚರ್ಚೆ ಮಾಡುತ್ತೀರಿ. ಅದೇ ರೀತಿ ಧರ್ಮದ ಚರ್ಚೆ, ಆತ್ಮನ ಚರ್ಚೆ, ತೀರ್ಥಂಕರರ ಚರ್ಚೆಯನ್ನು ಮಾಡಬಹುದಲ್ಲಾ! ಜಗತ್ತಿನ ಸನ್ಮಾನ ಮಾಡುತ್ತಿರುತ್ತೀರಿ. ಹಾಗೆಯೇ ಆತ್ಮನಿಗೂ ಸನ್ಮಾನ ಮಾಡಿರಿ. ಅದು ಒಮ್ಮೆ ಅಲ್ಲ, ಆಗಾಗ ಮಾಡುತ್ತಿರಬೇಕು.

**ಅಭೀಕ್ಷ್ಣಂತು ಮುಹುರ್ಮುಹು ।**

ಭಾರತದಲ್ಲಿ 'ಕಣಾದ' ಎಂಬ ಋಷಿಗಳೊಬ್ಬರಿದ್ದರು. ಅವರು ಪರಮಾಣುವಿನ

ವಿಚಾರವಾಗಿ ಬಹಳ ಚಿಂತನೆ ಮಾಡಿದರು. ಒಮ್ಮೆ ಅವರು ಯಾವುದೋ ಒಂದು ಗ್ರಂಥದ ಅಧ್ಯಯನ ಮಾಡುತ್ತಿದ್ದರು. ಅಧ್ಯಯನದಲ್ಲಿ ಅವರಿಗೆ ಎಷ್ಟೊಂದು ಆಸಕ್ತಿಯಿತ್ತೆಂದರೆ ದಾರಿಯಲ್ಲಿ ನಡೆಯುತ್ತಿದ್ದಾಗಲೂ ತಮ್ಮ ಓದನ್ನು ಬಿಡುತ್ತಿರಲಿಲ್ಲ. ಒಮ್ಮೆ ಕಾಡು ದಾರಿಯಲ್ಲಿ ನಡೆಯುತ್ತಿದ್ದಂತೆ ಅವರು ಒಂದು ರಾಶಿಯಲ್ಲಿ ಸಿಕ್ಕಿಹಾಕಿಕೊಂಡರು. ಅದನ್ನು ವನದೇವತೆಗಳು ನೋಡಿದರು. ಅವರಿಗೆ ಈ ಋಷಿಯ ಮೇಲೆ ಕರುಣೆ ಹುಟ್ಟಿತು. ಅವರು ಋಷಿಗಳನ್ನು ಆ ಸಿಕ್ಕಿನಿಂದ ಬಿಡಿಸಿ ಹೊರತಂದು "ನೀವೇನು ರಸ್ತೆಯನ್ನು ಮರೆತಿರಾ ?" ಎಂದು ಕೇಳಿದರು. ಅದಕ್ಕೆ ಅವರು "ಹಾಗೇನಿಲ್ಲ ಚಿಂತನೆ ಮಾಡುತ್ತಾ ನಡೆಯುತ್ತಿದ್ದೆ ಆಗ ಈ ರಾಶಿಯಲ್ಲಿ ಬಿದ್ದುಬಿಟ್ಟೆ" ಎಂದರು. ಆಗ ವನದೇವತೆಗಳು "ನೀವು ವರದಾನ ಪಡೆಯುವುದಾಗಿದ್ದರೆ ನಮ್ಮಿಂದ ಏನಾದರೂ ಕೇಳಿ" ಎನ್ನಲು ಋಷಿವರ್ಯರು ಆಶ್ಚರ್ಯದಿಂದ 'ವರದಾನವೇ ! ನಾನು ಏನನ್ನು ಕೇಳಲಿ ?' ಎಂದರು. "ಮನಸ್ಸಿನಲ್ಲಿ ಯಾವ ಇಚ್ಛೆಯಿದೆಯೋ ಅದನ್ನು ಕೇಳಿ ಪಡೆಯಿರಿ" ಎಂದುತ್ತರ ಬಂತು. ಕೂಡಲೇ ಋಷಿವರೇಣ್ಯರು "ವರದಾನ ಕೊಡುವುದಾದರೆ ನನ್ನ ಕಾಲುಗಳಿಗೆ ಎರಡು ಕಣ್ಣುಗಳನ್ನು ಕೊಡಿ. ಅದರಿಂದ ನಾನು ನಡೆಯುತ್ತಿದ್ದಂತೆ ಕಾಲುಗಳು ರಸ್ತೆಯನ್ನು ನೋಡುತ್ತಾ ನಡೆಯಲಿ ಮತ್ತು ನನ್ನ ಸಹಜವಾದ ಎರಡು ಕಣ್ಣುಗಳು ಅಧ್ಯಯನದಲ್ಲಿ ನಿರತವಾಗಿರಲಿ. ಆಗ ಕಣ್ಣುಗಳ ಮುಂದೆ ಶಾಸ್ತ್ರತಪ್ಪಿಸಿಕೊಳ್ಳಲಾರದು" ಎಂದರು ಮುಂದೆ ಏನಾಯಿತೋ ಅದು ಅಪ್ರಸ್ತುತ. ಆದರೆ ಅಂದಿನಿಂದ ಕಣಾದ ಋಷಿಗಳಿಗೆ **'ಅಕ್ಷಪಾದ'** ಎಂಬ ಹೆಸರು ಬಂತು.

ಎಲ್ಲಿಯವರೆಗೆ ಸ್ವಾಧ್ಯಾಯದ, ಶಾಸ್ತ್ರಾಧ್ಯಯನದ ರುಚಿ ಇರುವುದಿಲ್ಲವೋ, ಆಸಕ್ತಿಯಿರುವುದಿಲ್ಲವೋ ಅಲ್ಲಿಯವರೆಗೆ ಜೀವನ ಸಾರ್ಥಕವಾಗಲಾರದು. ಧರಿಸುವ ಬಟ್ಟೆಗಳನ್ನು ಸುರಕ್ಷಿತವಾಗಿರಿಸಲು ಕಪಾಟುಗಳನ್ನಿಡುತ್ತೀರಿ. ಒಂದು ಚಿಕ್ಕ ಕಪಾಟಿನಲ್ಲಿ ಕೆಲವು ಶಾಸ್ತ್ರಗ್ರಂಥಗಳನ್ನು ಇಡಿ. ಮನೆಯಲ್ಲಿ ಯಾರಾದರೂ ಓದಬಹುದು, ಯಾರಾದರೂ ಚಿಂತನೆ ಮಾಡಬಹುದು. ಇತರ ಸಾಂಸಾರಿಕ ವಸ್ತುಗಳಿಗಾಗಿ ನೀವು ಎಷ್ಟೊಂದು ಖರ್ಚು ಮಾಡುತ್ತೀರಿ ! ಆದರೆ ಆತ್ಮನ ಕಲ್ಯಾಣಕ್ಕಾಗಿ ಬೇಕಾಗಿರುವ ಯಾವ ಸಾಧನಗಳನ್ನೂ ನೀವು ಸಂಗ್ರಹಿಸುವಂತೆ ತೋರುವುದಿಲ್ಲ. ಈಗ ಪಶು ಜೀವನಕ್ಕೂ ನಿಮ್ಮ ಜೀವನಕ್ಕೂ ಇರುವ ಅಂತರವೇನೆಂದು ಸ್ವಲ್ಪ ಯೋಚನೆ ಮಾಡಿರಿ. ಪಂಡಿತ್ ಆಶಾಧರಜೀ ಒಂದು ಮಾತನ್ನು ಹೇಳಿದರು. ಅದು ಎಷ್ಟೊಂದು ಮಾರ್ಮಿಕವಾದ ಮಾತೆಂಬುದನ್ನು ಇಲ್ಲಿ ನೋಡಿ- 'ಮನುಷ್ಯನಾಗಿ ಹುಟ್ಟಿಯೂ ಯಾವನಲ್ಲಿ ಧರ್ಮದ ಬಗ್ಗೆ ರುಚಿಯಿಲ್ಲವೋ, ಸಮ್ಯಕ್ ದರ್ಶನವಿಲ್ಲವೋ, ಅವನು ಪಶುವಿಗೆ ಸಮಾನನು. ಪಶುವಿಗೆ ಕೂಡಾ ಸಮ್ಯಗ್ದರ್ಶನವಾಯಿತೆಂದರೆ ಅದು ಪೂಜ್ಯ."

ಮಹಾನುಭಾವರೇ ! ತಾವು ತಮ್ಮ ಮನೆ ನಡೆಸುವುದಕ್ಕಾಗಿ, ಗೃಹಸ್ಥಿ ಸಾಗಿಸುವುದಕ್ಕಾಗಿ ಪರಿಶ್ರಮ ಪಡುತ್ತೀರಿ, ಸ್ವತಃ ಸಂಪಾದಿಸುತ್ತೀರಿ. ಆದರೆ ಸಾಲ ಮಾಡಿ ಎಷ್ಟು ದಿನ ನೀವು ಮನೆಯನ್ನು ನಡೆಸುತ್ತೀರಿ ? ಎಷ್ಟುದಿನ ಸಾಲ ತರಬಲ್ಲಿರಿ ? ಹಾಗೆಯೇ ನೀವು



ನಮ್ಮಿಂದಲೂ ಎಷ್ಟುದಿನ ಉಪದೇಶ ಪಡೆಯಬಲ್ಲಿರಿ ? ಸ್ವಯಂ ಸ್ವಲ್ಪ ಅಧ್ಯಯನ ಮಾಡಿರಿ. ನಾವು ಉಪದೇಶ ಕೊಟ್ಟರೆ ಎಷ್ಟು ದಿನ ಕೊಡಬಹುದು ? ಹೆಚ್ಚೆಂದರೆ ನಾಲ್ಕು ತಿಂಗಳು. ಆದರೂ ನಿಮಗೆ ಇದರ ಲಾಭ ಆಗುವುದು ಯಾವಾಗ ಎಂದರೆ ನೀವು ಸ್ವಯಂ ಸ್ವಾಧ್ಯಾಯ ಯಾವಾಗ ಮಾಡುತ್ತೀರೋ ಆಗ ಮಾತ್ರ. ತತ್ತ್ವಜ್ಞಾನದ ಮಾತುಗಳು, ಧರ್ಮದ ವಿಚಾರಗಳು, ಆತ್ಮಕಲ್ಯಾಣದ ನುಡಿಗಳು. ಇವೆಲ್ಲಾ ಅತ್ಯಂತ ಮೌಲಿಕವಾಗಿದ್ದು ಅವುಗಳ ಪೂರ್ಣ ಪ್ರಯೋಜನ ದೊರಕುವುದು ಕೇವಲ ಸ್ವಾಧ್ಯಾಯದಿಂದ.

ಪರುಷದ ಕಲ್ಲು ಸ್ಪರ್ಶವಾದಾಗ ಲೋಹವು ಚಿನ್ನವಾಗುತ್ತದೆ. ಪರುಷದ ಕಲ್ಲು ಲೋಹವನ್ನು ಚಿನ್ನ ಮಾಡಬಲ್ಲುದೇ ಹೊರತು ಅದು ಚಿನ್ನವನ್ನು ತನ್ನಂತೆ ಮಾಡಲಾರದು. ಆದರೆ ಭಗವಂತನ ವಾಣಿ-ಜಿನವಾಣಿಯ ಸ್ಪರ್ಶ ಯಾವ ಪ್ರಾಣಿಗಾಗುತ್ತದೋ ಅವನನ್ನು ಅದು ಭಗವಂತನನ್ನಾಗಿಯೇ ಮಾಡುತ್ತದೆ. ಗೌತಮ ಗಣಧರರು ಸಮವಸರಣದಲ್ಲಿ ಭಗವಂತನೊಡನೆ ಆತ್ಮನ ವಿಚಾರವಾಗಿ ಕೇವಲ ಅರವತ್ತು ಸಾವಿರ ಪ್ರಶ್ನೆಗಳನ್ನು ಕೇಳಿದರು. ಅವರಿಗೆ ಆತ್ಮನ ಬಗ್ಗೆ ಅಷ್ಟೊಂದು ಜಿಜ್ಞಾಸೆಯಿತ್ತು. "ಆತ್ಮನು ನಿತ್ಯನೇ ? ಅಥವಾ ಆತ್ಮನು ಅನಿತ್ಯನೇ ? ಆತ್ಮನಿಗೆ ನಾಶವಿದೆಯೇ? ಆತ್ಮನು ಶಾಶ್ವತನೇ?" ಹೀಗೆ ಕೇಳುತ್ತಾ ಹೋದರು.

ಸಮುದ್ರದ ನೀರು ನಿತ್ಯ, ಆದರ ತೆರೆಗಳು ಅನಿತ್ಯ. ತೆರೆಗಳು-ನೀರಿನಲ್ಲಿ ಸಮುದ್ರದಲ್ಲೇ ಹುಟ್ಟಿ ಅದರಲ್ಲೇ ವಿಲೀನಗೊಳ್ಳುತ್ತವೆ. ತೆರೆಗಳು ಅನಿತ್ಯ. ಇದೇ ಪ್ರಕಾರ ಆತ್ಮನು ನಿತ್ಯ, ಆತ್ಮನ ಪರ್ಯಾಯ ಅನಿತ್ಯ. ಅನೇಕ ಪರ್ಯಾಯಗಳು ಉತ್ಪನ್ನವಾಗುತ್ತವೆ ಮತ್ತು ವಿಲೀನಗೊಳ್ಳುತ್ತವೆ. ಆದರೆ ಆತ್ಮನು ನಷ್ಟವಾಗುವುದಿಲ್ಲ. ಅವನು ಶಾಶ್ವತ, ಅಜರ, ಅಮರ, ಚೈತನ್ಯ ಶಕ್ತಿದಾಯಕ. ನೀರಿನ ತೆರೆಗಳಂತೆ ಅನೇಕ ವಿಚಾರಗಳು ಹುಟ್ಟುತ್ತವೆ, ನಷ್ಟಗೊಳ್ಳುತ್ತವೆ, ಆದರೆ ಆತ್ಮನು ನಿತ್ಯ.

ಆತ್ಮನೊಂದಿಗೆ ಯಾರಿಗೆ ಈ ಜಗತ್ತಿನಲ್ಲಿ ಸ್ವಲ್ಪವಾದರೂ ಪರಿಚಯವಿರುತ್ತದೋ, ಅವನೇ ಭಾಗ್ಯಶಾಲಿ. ನಾವು ಇತರ ಪದಾರ್ಥಗಳ ಬಗ್ಗೆ ಬೆಲೆ ಕಟ್ಟುತ್ತೇವೆ. ಆದರೆ ಆತ್ಮನ ಬೆಲೆಯನ್ನು ಕಟ್ಟಲಾರೆವು. ಶರೀರದಿಂದ ಆತ್ಮನು ಬೇರ್ಪಟ್ಟ ಮೇಲೆ ಆ ಶರೀರಕ್ಕೆ ಯಾರೂ ಬೆಲೆ ಕಟ್ಟುವುದಿಲ್ಲ. ಹೇಗೆ ಈ ಶರೀರವನ್ನು ಬೇಗನೆ ನಷ್ಟಗೊಳಿಸುವುದೆಂದು ಯೋಚನೆ ಮಾಡುತ್ತಾರೆ. ಈಗ ಯೋಚಿಸಿ ಹೇಳಿ ಈ ಶರೀರಕ್ಕೆ ಬೆಲೆ ಬರಲು ಯಾವುದು ಕಾರಣವಾಗಿದೆ ಎಂಬುದನ್ನು, ಅದಕ್ಕೆ ಕಾರಣ ಆತ್ಮ. ಹೀಗಿದ್ದರೂ ನಾವು ಕೇವಲ ಶರೀರದ ಧ್ಯಾನವನ್ನೇ ಮಾಡುತ್ತೇವೆ. ಆತ್ಮನನ್ನು ಮರೆತುಬಿಡುತ್ತೇವೆ. ಶರೀರಕ್ಕಾಗಿ ಅನೇಕ ಉಪಾಯ ಕೈಗೊಳ್ಳುತ್ತೇವೆ.

ಒಬ್ಬ ಕುರುಡ ವ್ಯಕ್ತಿ ದುಃಖಿತನಾಗಿದ್ದ. ಅವನಿಗೆ ಕಣ್ಣಿಲ್ಲವೆಂಬುದೇ ದುಃಖಕ್ಕೆ ಕಾರಣ. ಏಕೆಂದರೆ ಅವನು ಶಾಸ್ತ್ರಸ್ವಾಧ್ಯಾಯ ಮಾಡಲಾರ. ಮತ್ತೊಬ್ಬ ವ್ಯಕ್ತಿಗೆ ಕಾಲುಗಳಿಲ್ಲವೆಂಬ ಕಾರಣಕ್ಕಾಗಿ ದುಃಖ. ತನಗೆ ತೀರ್ಥಯಾತ್ರೆ ಮಾಡುವ ಸಾಧ್ಯತೆ ಇಲ್ಲವಲ್ಲಾ ಎಂಬ ಕೊರಗು

ಅವನಿಗೆ. ಹೀಗೆ ಕೇವಲ ಒಂದೊಂದು ಅಂಗವಿಲ್ಲದಿರುವ ಕಾರಣಕ್ಕಾಗಿ ಅವರೆಲ್ಲಾ ದುಃಖಿಗಳಾಗಿದ್ದಾರೆ. ತಾವಾದರೋ ಆರೋಗ್ಯವಾಗಿದ್ದೀರಿ. ಪಂಚೇಂದ್ರಿಯಗಳಿವೆ, ಅಹಿಂಸಕ ಸಂಸ್ಕೃತಿಯಲ್ಲಿ, ಉತ್ತಮ ಕುಲದಲ್ಲಿ ಜನ್ಮ ತಾಳಿದ್ದೀರಿ. ತಮಗೆ ಎಲ್ಲಾ ರೀತಿಯ ಸೌಲಭ್ಯಗಳು ದೊರೆತಿವೆ. ಆದರೂ ತಾವು ಧರ್ಮಧ್ಯಾನ ಮಾಡುವುದಿಲ್ಲ, ಧರ್ಮದಲ್ಲಿ ರುಚಿಯಿಲ್ಲ ಎಂದರೆ ಈ ಜೀವನಲ್ಲಿ ಏನು ಲಾಭವಿದೆ ? ಮನೆ ನಡೆಸಲು ಸ್ವಯಂ ಸಂಪಾದಿಸಬೇಕು, ಸ್ವಯಂ ಕಲ್ಯಾಣಕ್ಕಾಗಿ ಸ್ವಯಂ ಪ್ರಯಾಸ ಪಡಬೇಕು. ಆದ ಕಾರಣ ಪ್ರತಿದಿನವೂ ಸ್ವಾಧ್ಯಾಯ ಮಾಡುತ್ತೇವೆಂಬ ಸಂಕಲ್ಪ ಮಾಡಿರಿ. ಆಗಲೇ ನಿಮ್ಮ ಉದ್ಧಾರವಾಗಬಲ್ಲುದು.

++++++++++++++++

## ವಿದ್ಯಾನಂದ ವಚನಾಮೃತ

*''ಜೈನ ಧರ್ಮಗ್ರಂಥಗಳಲ್ಲಿ ಮೌಲಿಕವಾದ ವಿಷಯಗಳನ್ನು ಹೇಳುವಾಗ ಹುಟ್ಟುವುದು ಮಾತ್ರ ಮಂಗಳವಲ್ಲ, ಸಾವು ಕೂಡಾ ಮಂಗಳವೆಂದೇ ಹೇಳಿದ್ದಾರೆ. ದೇವರ ಹೆಸರು ತೆಗೆದುಕೊಂಡು ಯಾವನು ಮಂಗಳಮಯ ಶರೀರವನ್ನು ಬಿಡುತ್ತಾನೋ ಆದರಿಂದ ಅವನಿಗೆ ಒಳ್ಳೆಯ ಗತಿಯೇ ಸಿಗುವುದು. ಸಾವು ಅಮಂಗಳವಲ್ಲ, ಆದರೆ ಸಾವು ಮಂಗಳಮಯವಾಗಬೇಕಾದರೆ ಒಳ್ಳೆಯ ವ್ರತ-ನಿಯಮಗಳನ್ನು ತೆಗೆದುಕೊಂಡು ಶುಭ ಪರಿಣಾಮದಲ್ಲಿ ಸಾಯಬೇಕು.*

*ಯಾವ ಧರ್ಮಾತ್ಮನು ಪ್ರತಿದಿನವೂ ಸ್ವಾಧ್ಯಾಯ ಮಾಡಿಕೊಂಡು ಪೂಜಾ ಪಾಠ ನಡೆಸುತ್ತಾ ಆಗಾಗ ತೀರ್ಥಯಾತ್ರೆ ಕೈಗೊಳ್ಳುವನೋ, ಅವನು ಹನ್ನೆರಡು ವರ್ಷಗಳಿಗಿಂತ ಮೊದಲೇ ತನ್ನ ಸಾವನ್ನು ತಿಳಿದುಕೊಳ್ಳಬೇಕು. ತಪ್ಪಿದರೆ ಆರು ವರ್ಷ ಮುಂಚಿತವಾಗಿ ತಿಳಿದುಕೊಳ್ಳಬೇಕು. ಅದೂ ಆಗದಿದ್ದರೆ ಆರು ತಿಂಗಳು ಮುಂಚಿತವಾಗಿ ತಿಳಿದುಕೊಳ್ಳಬೇಕು. ಅದೂ ಸಾಧ್ಯವಾಗದಿದ್ದರೆ ಮೂರು ತಿಂಗಳು ಮುಂಚಿತವಾಗಿಯಾದರೂ ತಿಳಿದುಕೊಳ್ಳಬೇಕು ಅಥವಾ ಹದಿನೈದು ದಿವಸ ಮುಂಚಿತವಾಗಿ ಸಾವನ್ನು ತಿಳಿದಿರಬೇಕು. ಇವಾವುದೂ ಸಾಧ್ಯವಾಗದಿದ್ದರೆ ಕೊನೆಯಪಕ್ಷ ೪೨ ನಿಮಿಷ ಮುಂಚಿತವಾಗಿಯಾದರೂ ತಿಳಿದುಕೊಂಡಿರಬೇಕು. ಅನಂತರ ಶ್ರದ್ಧೆಯಿಂದ ದೇವರ ಧ್ಯಾನ ಮಾಡಬೇಕು. ಇದರಿಂದ ಸಲ್ಲೇಖನ-ಸಮಾಧಿಮರಣ ಲಭಿಸುವುದು. ಇಷ್ಟು ಮಾಡದೆ ಅವನು ಡಾಕ್ಟರ್ ಬೆನ್ನು ಹತ್ತಿ ''ಬದುಕಿಸಿಕೊಡಿ, ಇಂಜೆಕ್ಷನ್ ಕೊಡಿ, ಔಷಧಿಕೊಡಿ, ಏನಾದರೂ ಬಾಯಿಗೆ ಹಾಕಿ, ನಾನು ಇನ್ನೂ ಎರಡು ಗಂಟೆಯಾದರೂ ಬದುಕಬೇಕು'' ಎಂದು ಕಾಡಿದರೆ ಆ ಮನುಷ್ಯ ಎಷ್ಟೇ ಧರ್ಮ ಮಾಡಿದ್ದರೂ, ಅದೆಲ್ಲ ವ್ಯರ್ಥ, ನಿರರ್ಥಕವಾಗುವುದು.*



-೨-

## ಜೈನ ಧರ್ಮವು ಜಗತ್ತಿನ ಬಂಧು

ಮಹಾನುಭಾವರೇ, ಶ್ರಮಣ ಸಂಸ್ಕೃತಿ ಅತ್ಯಂತ ಪ್ರಾಚೀನವಾದುದು. ಈ ಸಂಸ್ಕೃತಿಯು ಭಾರತ ದೇಶಕ್ಕೆ ಏನನ್ನು ಕೊಟ್ಟಿದೆಯೋ ಅದನ್ನು ಆಧುನಿಕ ಶ್ರಾವಕ ಸಮಾಜವು ತಿಳಿಯಲಾರದು. ತೀರ್ಥಂಕರರ ಮೂಲಕ ಹೇಳಲ್ಪಟ್ಟ ಧರ್ಮ ಯಾವುದಿದೆಯೋ ಅದು ಜಗತ್ತಿನಲ್ಲಿ ಎಲ್ಲಕ್ಕಿಂತ ಸರಳ ಧರ್ಮವಾಗಿದೆ. ಪೂಜೆಗೋಸ್ಕರ ಹೂವಿನ ಎಸಳನ್ನು ತರುತ್ತಿದ್ದ ಕಪ್ಪೆಯು ಆನೆಯ ಕಾಲಿನ ತುಳಿತಕ್ಕೆ ಸಿಕ್ಕಿ ಸತ್ತುಹೋಯಿತು. ಭಕ್ತಿ-ಭಾವದ ಕಾರಣದಿಂದ ಸ್ವರ್ಗ ಸೇರಿತು. ನರಳುತ್ತಿದ್ದ ನಾಯಿಯನ್ನು ಜೀವಂಧರ ರಾಜಕುಮಾರನು ತೊಡೆಯ ಮೇಲಿರಿಸಿ ಣಮೋಕಾರ ಮಂತ್ರವನ್ನು ಉಪದೇಶಿಸಿದನು. ಆ ನಾಯಿಯು ಕೂಡಾ ಸ್ವರ್ಗ ಪಡೆಯಿತು.

ಆನೆಯ ಮೇಲೆ ಕುಳಿತು ನದೀ ದಂಡೆಯಲ್ಲಿ ಸಂಚಾರ ಮಾಡುತ್ತಿದ್ದ ರಾಜಕುಮಾರ ಪಾರ್ಶ್ವನಾಥನು ಬೆಂಕಿಯಲ್ಲಿ ಉರಿಯುತ್ತಿದ್ದ ನಾಗ-ನಾಗಿನಿಯರಿಗೆ ಣಮೋಕಾರ ಮಂತ್ರ ಹೇಳಿಕೊಡಲು ಅವು ಸ್ವರ್ಗದಲ್ಲಿ ಧರಣೇಂದ್ರ-ಪದ್ಮಾವತಿ ಆದವು. ಪ್ರಥಮಾನುಯೋಗದಲ್ಲಿ ಈ ರೀತಿಯ ಅನೇಕ ಉದಾಹರಣೆಗಳು ದೊರಕುತ್ತವೆ. ಹಾವಿನ ಮೇಲೆ ಕರುಣೆ ತೋರಿಸಿ ಅದಕ್ಕೆ ಧರ್ಮ-ಮಂತ್ರ ಉಪದೇಶ ಕೊಡಲಾಯಿತು. ನಾಯಿಯನ್ನು ಎದೆಗವಚಿ ಹಿಡಿದು ಪ್ರೀತಿಸಲಾಯಿತು. ಧರ್ಮದ ಪ್ರಭಾವದಿಂದ ತಿರ್ಯಂಚ ಪ್ರಾಣಿಯಾದ ಕಪ್ಪೆಯು ಸ್ವರ್ಗವನ್ನು ಸೇರುವಂತಾಯಿತು. ''ಜಿನಧರ್ಮ-ಜೈನಧರ್ಮ''ವು ಜಗತ್ತಿನ ಬಂಧುವಾಗಿದೆ. ಆದರೆ ನಾವು ಮಾತ್ರ ಈ ಮಾತನ್ನು ತಿಳಿಯಲಾರದವರಾಗಿದ್ದೇವೆ. ಆದುದರಿಂದಲೇ ಇಂದು ನಾವು ಸಂಕೀರ್ಣರಾಗಿದ್ದೇವೆ. ನಮ್ಮ ಮನೋವೃತ್ತಿ ಸಂಕೀರ್ಣವಾಗಿದೆ. ಈ ಕಾರಣದಿಂದಲೇ ನಮ್ಮ ಸಂಖ್ಯೆ ಕ್ಷೀಣವಾಗುತ್ತಾ ಬಂದಿದೆ. ನಮ್ಮ ಆಚಾರ್ಯರ ಇಷ್ಟೊಂದು ಉದಾರ ದೃಷ್ಟಿಯನ್ನು ನೋಡಿದ ನಂತರವೂ ನಾವು ಅತ್ಯಂತ ಸಂಕೀರ್ಣರಾಗಿದ್ದೇವೆ. ಇಂದು ಎಲ್ಲಿಗೆ ತಲುಪಿದ್ದೇವೆ ? ಇದನ್ನು ನೋಡಿದಾಗ ಬಹಳ ಆಶ್ಚರ್ಯವಾಗುತ್ತದೆ. ಅಕ್ಬರನ ಕಾಲದಲ್ಲಿ ಭಾರತದಲ್ಲಿ ನಾಲ್ಕು ಕೋಟಿ ಜೈನರಿದ್ದರು. ನಾವು ಈ ಉದಾರ ಧರ್ಮವನ್ನು ಸಂಕೀರ್ಣವಾಗುವಂತೆ ಮಾಡಬಾರದು. ಜಿನಧರ್ಮದಲ್ಲಿ ಪಶು-ಪಕ್ಷಿ, ತಿರ್ಯಂಚ ಪ್ರಾಣಿಗಳನ್ನೂ ನಮ್ಮವರೆಂದು ತಿಳಿಯುವ ಶಿಕ್ಷಣ ನೀಡಲಾಗಿದೆ. ಹೀಗಿರುವಾಗ ನಾವು ನಮ್ಮ ನೆರೆಹೊರೆಯವರನ್ನು, ನಮ್ಮ ಜೊತೆಗಾರರನ್ನು ನಮ್ಮವರೆಂದು ತಿಳಿಯಲಾರೆವೇ ? ನಮ್ಮ ರಾಗ-ದ್ವೇಷವನ್ನು ಬಿಟ್ಟುಬಿಡಲಾರೆವೇ ?

ಕಬೀರರು ''ಕಬೀರ್ ದೋಹಾವಲೀ''ಯಲ್ಲಿ ಒಂದು ಇಡೀ ಅಧ್ಯಾಯವನ್ನು ಜೈನರಿಗೆ ಸಂಬಂಧಿಸಿ ಬರೆದಿದ್ದಾರೆ. ಅದರಲ್ಲಿಯ ಒಂದು ದೋಹವನ್ನು ತಮಗೆ ತಿಳಿಸುತ್ತೇವೆ.

ಹಾಗೆ ನಾವು ಹೇಳುವಾಗ ತಮ್ಮ ಮನಸ್ಸಿಗೆ ಸ್ವಲ್ಪ ಅಸಂತೋಷ ಉಂಟಾಗಬಹುದು. ಆದರೂ ಹೇಳುತ್ತೇವೆ, ಕೇಳಿ-

ಪಡೌಸೀಸೇ ರೂಸ್ನಾ, ತಿಲ್-ತಿಲ್ ಸುಖ್ ಕೀ ಹಾನಿ ।
ಪಂಡಿತ್ ಭಯೇ ಸರಾವಗೀ, ಪಾನೀ ಪೀವೇ ಛಾನಿ ॥

ಜಲಕಾಯಿಕ ಜೀವಿಗಳಿಗೆ ಕೂಡಾ ಕಷ್ಟ ಉಂಟಾಗಬಾರದು ಎಂಬ ದೃಷ್ಟಿಯಿಂದ ನಾವು ನೀರನ್ನು ಸೋಸಿ ಕುಡಿಯುತ್ತೇವೆ. ಆದರೆ ನಮ್ಮ ಸಾಧರ್ಮೀ ಸಹೋದರರೊಂದಿಗೆ ದ್ವೇಷ ಮಾಡುತ್ತೇವೆ, ಮತ್ಸರ ಪಡುತ್ತೇವೆ. ಇದು ಎಂತಹ ಧರ್ಮ ?

ನಮ್ಮ ಮೇಲೆ ಬಹು ದೊಡ್ಡ ಜವಾಬ್ದಾರಿಯಿದೆ. ನಾವು ಶಾಕಾಹಾರೀ ಜನರು, ಅಹಿಂಸಕ ಸಂಸ್ಕೃತಿಗೆ ಮನ್ನಣೆ ಕೊಡುವವರು. ನಾವು ಸ್ವಯಂ ಈ ಮಾರ್ಗದಲ್ಲಿ ನಡೆದು ಜಗತ್ತಿಗೆ ಮಾರ್ಗದರ್ಶನ ಮಾಡುವವರು. ಜೈನ ಸಮಾಜವು ಸದೈವ ಅನುಶಾಸನಬದ್ಧ, ಅನುಶಾಸನಶೀಲದ್ದಾಗಿದೆ. ನಮ್ಮ ಸಂಸ್ಕೃತಿ ಆತ್ಮಾನುಶಾಸನದ್ದಾಗಿದೆ. ಪರಾನುಶಾಸನದಲ್ಲಿ ದುಷ್ಟ ನಿಗ್ರಹಕ್ಕಾಗಿ ಸರಕಾರೀ ವ್ಯವಸ್ಥೆಯಿದೆ. ನಾವು ವ್ಯವಹಾರದಲ್ಲಿ ಹಿಂಸೆ ಮಾಡುವುದರಿಂದ ಜೈಲಿಗೆ ಹೋಗಬೇಕಾಗುತ್ತದೆಂಬುದನ್ನು ನಿತ್ಯವೂ ಕಾಣುತ್ತಿದ್ದೇವೆ. ಸುಳ್ಳು ಹೇಳುವುದರಿಂದ ನಿಂದೆಗೆ ಗುರಿಯಾಗಬೇಕಾಗುತ್ತದೆ. ನಮ್ಮಲ್ಲಿ ಈ ಕೆಡುಕನ್ನು ತಡೆಯುವುದಕ್ಕಾಗಿ ಐದು ಅಣು ವ್ರತಗಳ ವಿಧಾನವಿದೆ. ಭಗವಾನ್ ಆದಿನಾಥರಿಂದ ಇಂದಿನ ವರೆಗೆ ಅವು ನಡೆಯುತ್ತಲೇ ಬಂದಿವೆ.

ನಮ್ಮಲ್ಲಿ ಶ್ರವಣ ಮತ್ತು ಸಾಧಕ, ಸಾಧು ಮತ್ತು ಶ್ರಾವಕ ಎಂಬ ಪರಂಪರೆ ಅವಿಚ್ಛಿನ್ನ ರೂಪದಿಂದ ಬಂದಿರುತ್ತದೆ. ಇವೆರಡರಲ್ಲೂ ಅವಿನಾಭಾವೀ ಸಂಬಂಧವಿದೆ. ಸಮಾಜವು ಸಿಂಧುವಾದರೆ ಸಾಧು ಅದರಲ್ಲಿಯ ಒಂದು ಬಿಂದು. ಸಮುದ್ರದಿಂದ ಒಂದು ಬಿಂದು (ಜಲ)ವನ್ನೆತ್ತಿ ಬೇರೆ ಮಾಡಿ ಒಂದು ಕಲ್ಲಿನ ಮೇಲಿಟ್ಟರೆ ಏನಾಗುತ್ತದೆ ? ಅದನ್ನು ಬೀಸುವ ಗಾಳಿ ಹಾರಿಸಿಬಿಡಬಹುದು. ಇಲ್ಲವೇ ಸೂರ್ಯನ ಕಿರಣ ಆರಿಸಿಬಿಡಬಹುದು. ಹಾಗೆಯೇ ಸಾಧುಗಳು ಸಮಾಜದಿಂದ ಬೇರೆಯಾಗಿ ನಿಲ್ಲಲಾರರು. ಅವರು ಕೂಡಾ ಸಮಾಜದ ಅಂಗವೇ ಆಗಿರುತ್ತಾರೆ. ಸಾಧು ಮತ್ತು ಶ್ರಾವಕ ಇವರೀರ್ವರಲ್ಲೂ ಪರಸ್ಪರ ಅಂಕುಶವಿದೆ, ಅನುಶಾಸನವಿದೆ. ನಾವು ಅಂತಹ ಶ್ರಾವಕರಿಂದಲೇ ಎಂದರೆ ಯಾರು ಶಾಖಾಹಾರಿಗಳೋ ಯಾರ ಅನ್ನ-ಪಾನಾದಿಗಳು ಶುದ್ಧವೋ ಮತ್ತು ಯಾರಲ್ಲಿ ಅರಹಂತ ಭಗವಾನರ ಬಗ್ಗೆ ಶ್ರದ್ಧೆಯಿದೆಯೋ ಅಂಥವರಿಂದ ಮಾತ್ರ ಆಹಾರ ಸ್ವೀಕರಿಸುತ್ತೇವೆ. ಸಾಧುಗಳ ಮೇಲೆ ಶ್ರಾವಕರ ನಿಯಂತ್ರಣವಿರುತ್ತದೆ. ಅಂತಹ ಯಾವುದೇ ಮಾತುಗಳಿದ್ದರೂ ಸಾಧುಗಳೊಂದಿಗೆ ವಿಚಾರ ವಿಮರ್ಶೆ ಮಾಡಬಹುದಾಗಿದೆ. ಈ ರೀತೀ ಸಮಾಜರೂಪೀ ಧರ್ಮರಥಕ್ಕೆ ಇಬ್ಬರು ಚಾಲಕರಿದ್ದಾರೆ, ವೃಷಭರಿದ್ದಾರೆ. ಹೇಗೆ ಯಾವುದೇ ರಥವನ್ನು ಎರಡು ಎತ್ತುಗಳು ಎಳೆದುಕೊಂಡು ಹೋಗುತ್ತವೋ ಹಾಗೆಯೇ ಸಾಧುಗಳು ಮತ್ತು ಶ್ರಾವಕರು ಕೂಡಾ



ಸಮಾಜರೂಪೀ ಧರ್ಮರಥವನ್ನು ಎಳೆಯುತ್ತಾರೆ, ಎಳೆದು ತರುತ್ತಾರೆ ಮತ್ತು ಸಿದ್ಧಾಲಯದ ವರೆಗೆ ಹೋಗುತ್ತಾರೆ.

ಇದು ಕಲಿಯುಗ. ಇದರಲ್ಲಿ ಅನೇಕ ವಿಷಯಗಳಿವೆ. ಭದ್ರಬಾಹು ಸಂಹಿತೆಯಲ್ಲಿ ಏನೇನು ವಿಷಯಗಳು ಬಂದಿವೆಯೋ, ಅವೆಲ್ಲ ಈ ವರ್ತಮಾನದಲ್ಲೂ ಇವೆ. ಶಾಸ್ತ್ರಗಳಲ್ಲಿ ಅವುಗಳ ನಿಶ್ಚಿತತೆ ಹೇಳಲ್ಪಟ್ಟರೆ ಅವುಗಳಿಗಾಗಿ ಆಶ್ಚರ್ಯ ಪಡುವಂತಹುದೇನೂ ಇಲ್ಲ, ಅವುಗಳಲ್ಲಿ ಯಾವುದೇ ಪರಿವರ್ತನೆ ಮಾಡಲಾಗುವುದೂ ಇಲ್ಲ, ಮಾಡಿಸಲಾಗುವುದೂ ಇಲ್ಲ. ಆದರೆ ನಮ್ಮ ಆದರ್ಶಗಳನ್ನು ಜೀವಂತವಾಗಿರಿಸಿಕೊಳ್ಳಬೇಕು.

ಯದಿ ವಾದ ವಾದಸ್ಯಾನ್ಯಹಾಮಲ ವಿಧಾತಕೃತ ।
ದೇಶಾಂತರ ಗತಿಸ್ತಸ್ಯಾನ್ನಚ ದುಷ್ಯೋ ವರ್ಷಾಸ್ವಪಿ ॥

ದೇಶ-ದೇಶಾಂತರದಲ್ಲಿ ಯಾವುದೇ ಶ್ರಾವಕ ಸಮಾಜದ ಮೇಲೆ ಯಾವುದೇ ಸಂಕಟ ಬಂದೊದಗಿದರೆ ಸಾಧುವು ಚಾತುರ್ಮಾಸದಲ್ಲಿ ಕೂಡಾ (ನದಿಯನ್ನು ದಾಟಿ) ಅಲ್ಲಿಗೆ ಹೋಗಿ ಅವರ ಸಂಕಟವನ್ನು ದೂರಗೊಳಿಸಬೇಕು. ಈ ಕೆಲಸಕ್ಕಾಗಿ ಯಾವುದೇ ರೀತಿಯ ಪ್ರಾಯಶ್ಚಿತ್ತದ ಅವಶ್ಯಕತೆಯಿರುವುದಿಲ್ಲ ಮತ್ತು ವಿಧಾನವೂ ಇರುವುದಿಲ್ಲ, ಸಾಧುಗಳ ಮೇಲೆ ಸಮಾಜ ಸುರಕ್ಷತೆಯ ಬಹುದೊಡ್ಡ ಹೊಣೆಗಾರಿಕೆಯನ್ನು ಹೇಳಲಾಗಿದೆ. ಸಾಧುಗಳು ದೇಶಾಂತರ ಹೋಗುವುದು, ಅವರ ಸಂಕಟ ದೂರಮಾಡುವುದು, ಅವರ ಸ್ಥಿತೀಕರಣದ ಪಾಲನೆ ಮಾಡಿಸುತ್ತಿರುವುದು, ಹೀಗೆ ಸಮಾಜದೊಂದಿಗೆ ಅವರನ್ನು ಜೋಡಿಸಲಾಗಿದೆ.

ಈಗ ಬಹಳಷ್ಟು ಚದುರಿ ಹೋಗಿದ್ದೇವೆ. ಎಲ್ಲಿಯವರೆಗೆ ನಾವು ಅಭೇದರಾಗಿದ್ದೇವೋ ಅಲ್ಲಿಯವರೆಗೆ ಈ ದೇಶದಲ್ಲಿ ನಮ್ಮ ಪ್ರತಾಪವಿತ್ತು, ಈಗ ದಿಗಂಬರ-ಶ್ವೇತಾಂಬರ ಎಂಬ ಎರಡು ಪಂಥಗಳಾಗಿವೆ. ಅವುಗಳಲ್ಲೂ ತೇರಹ್‌ಪಂಥೀ-ಬೀಸ್‌ಪಂಥೀ, ಸ್ಥಾನಕವಾಸೀ ಇತ್ಯಾದಿ ತುಂಡುಗಳಾಗುತ್ತಾ ಬಂದಿವೆ. ಕೃಷಿ ಯುಗದಿಂದ ಹೊರಟು ಇಂದು ವಿಜ್ಞಾನ ಯುಗಕ್ಕೆ ಬಂದು ಸಾಧರ್ಮೀ ಬಂಧುತ್ವ, ವ್ಯಾವಹಾರಿಕತೆ ಕೂಡಾ ಮರೆತುಹೋಗಿದೆ.

ನೆರೆಹೊರೆಯವರೊಂದಿಗೆ ಹೇಗೆ ಜೀವಿಸುವುದು ? ಇದನ್ನು ಕೂಡಾ ತಿಳಿದಿರಬೇಕು. ನೆರೆಹೊರೆಯವನು ದುಃಖಿಯಾಗಿದ್ದರೆ, ಅವನ ವೇದನೆಯನ್ನು ಅವನ ದುಃಖವನ್ನು ದೂರಗೊಳಿಸಲು ಪ್ರಯತ್ನಿಸಬೇಕು. ನೆರೆಹೊರೆಯವನ ದುಃಖವನ್ನು ನೋಡಿ ಕೂಡಾ ಕಣ್ಣು ಮುಚ್ಚಿ ಕುಳಿತರೆ ಅಭಿಮಾನದಿಂದ ಬೀಗಿದ ಆನೆಯು ಕಣ್ಣುಗಳನ್ನು ಮುಚ್ಚಿಕೊಂಡು ಹೋಗಿ ಹೊಂಡದಲ್ಲಿ ಬಿದ್ದು ಸಾಯುವಂತಹ ದುರ್ಗತಿ ಬರಬಹುದು.

ನ ಕದಾಚನಾಪಿ ಪರವೇದನಾಂ ವಿನಾ ನಿಜವೇದನಾ ಜಿನ ಜನಸ್ಯ ಜಾಯತೇ ।
ಗಜಮೀಲನೇನ ನಿಪತಂತಿ ಬಾಲಿಶಾಃ ಪರಶಕ್ತಿ ರಿಕ್ತಚಿದುಪಾಸಿಮೋಹಿತಾಃ ॥

ಆಚಾರ್ಯರು ನಮಗೆ ವ್ಯಾವಹಾರಿಕ ಜೀವನವನ್ನು ನಡೆಸುವ ಕಲೆಯನ್ನು ಕೂಡಾ

ಕಲಿಸಿದ್ದಾರೆ, ತಿಳಿಸಿಕೊಟ್ಟಿದ್ದಾರೆ. ನಮಗೆ ನಮ್ಮದೇ ಆದ ಒಂದು ಪ್ರತ್ಯೇಕ ಸಂವಿಧಾನವಿದೆ, ಪ್ರತ್ಯೇಕ ಆಚಾರ-ಸಂಹಿತೆಯಿದೆ.

ನಮ್ಮ ಧರ್ಮವು ಅಭಿನಿಬೋಧಕ ಜ್ಞಾನದ ಪ್ರೇರಣೆಯನ್ನು ನೀಡುತ್ತದೆ. ಸತತ ಆತ್ಮಾಭಿಮುಖಿಯಾಗಿರಬೇಕಾದ ಪ್ರೇರಣೆ ಕೊಡುತ್ತದೆ. ಯಾವನು ಸತತ ಆತ್ಮಾಭಿಮುಖಿಯಾಗಿರುತ್ತಾನೋ ಅವನೇ ಸಮ್ಯಗ್‌ದೃಷ್ಟಿಯು, ಸಮ್ಯಗ್‌ಜ್ಞಾನಿಯು ಮತ್ತು ಸಮ್ಯಗ್ ಚಾರಿತ್ರವಂತನಾಗಿರುತ್ತಾನೆ. ನಮ್ಮ (ತತ್ತ್ವಾರ್ಥ) ಸೂತ್ರವೇ ಹೇಳುತ್ತದೆ.

**ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ ॥**

ನಾವು ಈ ಮಾರ್ಗವನ್ನು ಎಂದಿಗೂ ಮರೆಯಬಾರದು. ಮಾತ್ರವಲ್ಲ ಇದನ್ನು ವರ್ಧಿಸಬೇಕು. ಜನರು ಈ ಮಾರ್ಗವು ಕಠಿಣವೆಂದು ಹೇಳುತ್ತಾರೆ. ಇದರ ಬಗ್ಗೆ ಆಚಾರ್ಯ ಕುಂದಕುಂದರು ಏನು ಹೇಳಿದ್ದಾರೆಂದು ಇಲ್ಲಿ ನೋಡಿ.

**ಜಂ ಸಕ್ಕದಿ ತಂ ಕಾರದಿ, ಜಂ ಚ ಣ ಸಕ್ಕೇದಿ ತಂ ಚ ಸದ್ದಹಣಂ।**
**ಕೇವಲಿ ಜಿಣೇಹಿ ಜಣಿದಂ ಸದ್ದಹಮಾಣಸ್ಸ ಸಮ್ಮತ್ತಂ ॥**

ತಮಗೆ ಎಷ್ಟು ಸಾಧ್ಯವೋ ಅಷ್ಟನ್ನೇ ಮಾಡಿ. ಯಾವುದು ಆಗುವುದಿಲ್ಲವೋ ಅದರ ಮೇಲೆ ಶ್ರದ್ಧೆಯಿಡಿ.

**ಕೀಜೇ ಶಕ್ತಿ-ಪ್ರಮಾಣ್, ಶಕ್ತಿ ಬಿನಾ ಶ್ರದ್ಧಾ ನಹೀಂ।**
**ಶಕ್ತಿ ತಸ್ತ್ಯಾಗತಪಸೀ....... ॥**

ನಿಮ್ಮಲ್ಲಿ ಎಷ್ಟು ಶಕ್ತಿಯಿದೆಯೋ ಅಷ್ಟರ ಪಾಲನೆ ಮಾಡಿರಿ. ಒಬ್ಬ ಚಿಕ್ಕ ಬಾಲಕನಿಗೆ ನೀನು ಹತ್ತು ಕಿಲೋ ಭಾರದ ವಸ್ತುವನ್ನು ಹೊತ್ತುಕೊಂಡು ಹೋಗೆಂದು ಹೇಳಿದರೆ ಅದು ಹೇಗೆ ಸಾಧ್ಯ ? ಆದುದರಿಂದಲೇ ಆಚಾರ್ಯರು ಹೇಳಿದರು- 'ಶಕ್ತಿತಃ' ಎಂದು. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಶಕ್ತಿ ಮತ್ತು ಭಕ್ತಿ ಇರುತ್ತದೆ.

ಸನ್ 1964ರ ನಂತರ ಈಗ ಪುನಃ ಇಲ್ಲಿ (ಜಯಪುರದಲ್ಲಿ) ಚಾತುರ್ಮಾಸದ ಯೋಗ ಒದಗಿ ಬಂದಿದೆ. ಎಲ್ಲಿ ಅನ್ನ-ನೀರಿನ ನಿಮಿತ್ತ ಉಂಟಾಗುತ್ತದೋ ಅಲ್ಲಿಗೆ ಜನರು ಹೋಗುತ್ತಾರೆ.

ಒಮ್ಮೆ ಕಬೀರರು ಭಜನೆ ಮಾಡುತ್ತಿದ್ದರು. ಮನೆಯಲ್ಲಿ ತಿನ್ನುವುದಕ್ಕೆ ಏನೂ ಇರಲಿಲ್ಲ. ಕಬೀರರ ಪತ್ನಿಗೆ ದುಃಖ ಉಂಟಾಗಿತ್ತು, ಹೇಳಿದಳು- 'ಸ್ವಾಮೀ, ಮನೆಯಲ್ಲಿ ತಿನ್ನುವುದಕ್ಕೆ ಏನೂ ಇಲ್ಲ, ಮಗ ಕಮಾಲ್ ಹಸಿದಿದ್ದಾನೆ. ನಾನು ಕೂಡಾ ಹಸಿವೆಯಿಂದ ಬಳಲುತ್ತಿದ್ದೇನೆ. ನೀವು ಭಜನೆ ಮಾಡುತ್ತಲೇ ಇದ್ದೀರಿ. ಹೋಗಿ ಭೋಜನಕ್ಕೆ ಏನಾದರೂ ವ್ಯವಸ್ಥೆ ಮಾಡಿರಿ' ಕೂಡಲೇ ಕಬೀರರು ಎದ್ದರು. ಅಷ್ಟರಲ್ಲಿ ಕಬೀರರ ಒಬ್ಬ ಭಕ್ತ ತಟ್ಟೆಯಲ್ಲಿ



ಹಾಲು, ತುಪ್ಪ, ಅವಲಕ್ಕಿ, ಗೋಧಿ ಹಿಟ್ಟು, ಬೇಳೆ ಇತ್ಯಾದಿಗಳನ್ನು ಹಿಡಿದುಕೊಂಡು ಬಂದನು. ಆಗ ಕಬೀರರು ಪತ್ನಿಯೊಡನೆ ಹೀಗೆ ಹೇಳಿದರು;-

**ರೋಜೀ ತೇರೀ ಭೋಜನ್ ಹೈ , ಕರ್ ದಿಲ್ ಸೇ ಆರಾಮ್ ।**
**ದಾನೇ-ದಾನೇ ಪರ್ ಲಿಖಾ ಹೈ , ಖಾನೇವಾಲೇ ಕಾ ನಾಮ್ ॥**

ಜಯಪುರದ ಯೋಗದಾನದಲ್ಲಿ ನಮ್ಮ ಹೆಸರು ಬರೆದಿದ್ದರೆ ನಾವು ಅನ್ಯ ಸ್ಥಾನಗಳಲ್ಲಿ ಚಾತುರ್ಮಾಸ ಮಾಡುವುದು ಹೇಗೆ ?

ಆಚಾರ್ಯ ಶಾಂತಿಸಾಗರಜೀ ಮಹಾರಾಜರು ಹೀಗೆ ಹೇಳುತ್ತಿದ್ದರು- 'ಸಾಧು ಯಾವಾಗ ಆಹಾರ ಸ್ವೀಕರಿಸುತ್ತಾನೋ ಆಗ ಶ್ರಾವಕನ ಕೈ ಮೇಲಿರುತ್ತದೆ ಮತ್ತು ಸಾಧುವಿನ ಕೈ ಕೆಳಗಿರುತ್ತದೆ. ಆಹಾರ ಸ್ವೀಕಾರದ ಬಳಿಕ ಯಾವಾಗ ಶ್ರಾವಕನು ಪ್ರಣಾಮ ಮಾಡುತ್ತಾನೋ ಆಗ ಅವನ ಕೈ ಕೆಳಗೆ ಮತ್ತು ಸಾಧುವಿನ ಕೈ ಮೇಲಿರುತ್ತದೆ. ಎಲ್ಲಿಯವರೆಗೆ ಸಾಧು ಮತ್ತು ಶ್ರಾವಕನ ಈ ಸಂಬಂಧವು ನಡೆಯುತ್ತಿರುತ್ತದೋ, ಅಲ್ಲಿಯವರೆಗೆ ಜೈನ ಧರ್ಮವು ನಡೆಯುತ್ತಲೇ ಇರಬಲ್ಲುದು. ಒಂದು ವೇಳೆ ಇವರಿಬ್ಬರ ಸಂಬಂಧ ವಿಚ್ಛೇದವಾಯಿತೆಂದಾದರೆ ಅವೆರಡೂ ಅಡಗಿ ಹೋಗಬಹುದು.

---

## ವಿದ್ಯಾನಂದ ವಚನಾಮೃತ

*ನಂದಿಮಿತ್ರ ಸೌದೆ ಮಾರಿ ಹೊಟ್ಟೆ ತುಂಬಿಸಿಕೊಳ್ಳಲು ಕೂಡಾ ಶಕ್ತಿಯಿಲ್ಲದವನಾಗಿದ್ದ. ಆದರೆ ಮುನಿಗಳ ಬಳಿ ಮೂರು ದಿನ ಸತ್ಸಂಗದಲ್ಲಿದ್ದು, ಮುನಿಗಳ ಮಾತನ್ನು ಕೇಳಿ, ದೇವರ ಹೆಸರನ್ನು ತೆಗೆದುಕೊಂಡು, ಸಲ್ಲೇಖನಾಧಾರಿಯಾಗಿ ಸಮಾಧಿ ಮರಣ ಪಡೆದು ಮುಂದಿನ ಭವದಲ್ಲಿ ಚಂದ್ರಗುಪ್ತ ಸಾಮ್ರಾಟನಾದನಲ್ಲ ! ಯಾರ ಭವಿಷ್ಯ ಏನು, ಎತ್ತ ಎಂದು ಹೇಳಲಿಕ್ಕಾಗದು. ಸುಮಾರು ೨೪೦೦ ವರ್ಷಕ್ಕಿಂತಲೂ ಹಿಂದೆ ಚಂದ್ರಗುಪ್ತನು ಭದ್ರಬಾಹು, ಶ್ರುತಕೇವಲಿಗಳ ಜೊತೆಯಲ್ಲಿ ಚಂದ್ರಗಿರಿಗೆ ಬಂದನು. ಇಲ್ಲಿ ತಪಸ್ಸು ಮಾಡಿದನು. ಶುಭ ಪರಿಣಾಮದಿಂದ ಸದ್ಗತಿ ಪಡೆದನು. ಅವನ ಚರಣ ಪಾದುಕೆ ಶ್ರವಣಬೆಳಗೊಳದ ಚಂದ್ರಗಿರಿಯಲ್ಲಿದೆ. ಮೂರೇ ಮೂರು ದಿನದ ಸತ್ಸಂಗ ಸಿಕ್ಕಿ ನಂದಿಮಿತ್ರನು ಆತ್ಮಕಲ್ಯಾಣ ಮಾಡಿಕೊಂಡಿರುವಾಗ ಪ್ರತಿನಿತ್ಯ ಬಂದು ನಾಲ್ಕು ತಿಂಗಳ ತನಕ ಪ್ರವಚನ ಕೇಳುತ್ತಿರುವ ನೀವು ಸಾಮ್ರಾಟ ಚಂದ್ರಗುಪ್ತನಲ್ಲ, ಭರತ ಚಕ್ರವರ್ತಿಗಳೇ ಆಗಬೇಕು.*